
ತುಳುನಾಡ್ದ ಪೊಲಿ ಎಚ್ಚಯಿನ

# ಮುಲ್ಕಿ ಸುಂದರ ರಾಮ ಶೆಟ್ಟಿ



ಎನ್.ಪಿ. ಶೆಟ್ಟಿ

ಕರ್ನಾಟಕ
ತುಳು ಸಾಹಿತ್ಯ
ಅಕಾಡೆಮಿ

# ತುಳುನಾಡ್ದ ಪೊಲಿ ಎಚ್ಚಯಿನ
# ಮುಲ್ಕಿ ಸುಂದರ ರಾಮ ಶೆಟ್ರ್

ಎನ್.ಪಿ. ಶೆಟ್ಟಿ

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ**
ಮಹಾನಗರಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575 003

**TULUNAADDA POLI YECHCHAYINA MULIK SUNDARA RAMA SHETR**
Book about Mulki Sundara Rama Shetty by N.P. Shetty, 'Isiri', Karnad, Mulki - 574 154.

Author
**N.P. Shetty**

Chief Editor
**Dr. Palthady Ramakrishna Achar**
President
Karnataka Tulu Sahitya Academy

Publisher
**Chandrahasa Rai B.**
Registrar
Karnataka Tulu Sahitya Academy

First Edition : 2011

© : Karnataka Tulu Sahitya Academy

Pages : 48

Price : ₹ 30

Cover Design : **Kalloor Nagesh**

Designed & Printed at :

**Aakrithi Prints**
K.S. Rao Road, Mangalore – 575 001
Tel. : 0824 2443002

# ಗುರ್ಕಾರ್ರೆನ ಮದಿಪು

ತುಳುವೆರ್ ಪಿರಾಕ್‌ಡ್ದಿಂಚಿ ನಡತೊಂದು ಬತ್ತಿನ ಆರಾಧನೆ, ಆಚರಣೆ, ನಂಬೊಳಿಗೆಲೆನ್ ಮಾತ ಒರಿತೊಂದು ಬತ್ತಿನಕುಲು. ಅಂಚಾದೇ ತುಳುನಾಡ್ ಪುಣ್ಯೊದ ನಾಡ್‌ಂದ್ ಪುದರ್ ಪಡೆತ್‌ಂಡ್. ಕರಿದ್ ಪೋಯಿನ ಎಡ್ಡೆ ವಿಸಯೊಲೆನ್ ಒರಿತೊಂದು ಪೋಪಿನವು ಎಡ್ಡೆ ಸಂಸ್ಕೃತಿ. ಸಂಸ್ಕೃತಿ ವೈಜ್ಞಾನಿಕತೆದ ಸುತ್ತುಗಟ್ಟ್‌ಡ್ ಉಪ್ಪೊಡು. ಸಾಮಾಜಿಕ ಪ್ರಜ್ಞೆ ಬೊಕ್ಕ ಧಾರ್ಮಿಕ ನಿಲೆಗಟ್ಟ್ ಅಯಿಕ್ ಬೋಡು. ಅಂಚಿನ ಸಂಸ್ಕೃತಿಯೇ ದುಂಬೊತೊಂದು ಪೋಪುಂಡು. ಬಾಸೆ, ಸಾಹಿತ್ಯೊ, ಕಲೆ, ಪರಪೋಕು, ಸೇವೆ – ಉಂದು ಮಾತ ಸಂಸ್ಕೃತಿದ ಬಾಗೊಲು. ನೆನ್ನ್ ಒರಿತ್‌ದ್ ಬುಳೆಪಯರೆಗಾದ್ ಬೆಂದಿನ ತುಳುವೆರ್ ಏತೋಜನ. ತುಳುವೆರ್ ಪಂಡ ಬಜೀ ತುಳು ಅಪ್ಪೆಬಾಸೆದಕುಲು ಮಾತ್ರ ಅತ್ತ್, ತುಳುನಾಡ್‌ಡ್ ಜಲ್ಮೊಗು ಬತ್ತಿನಕುಲು, ತುಳು ಬಾಸೆ ತೆರಿನಕುಲು, ತುಳುತ ಬಗೆಟ್ ಉಡಲ್ ದಿಂಜಿ ಹೆಗ್ಗಳಿಕೆ ದೀವೊನ್ನಕುಲು ಮಾತ ತುಳುವೆರ್.

ಒವ್ವಾಂಡಲಾ ಒಂಜಿ ಮರ್ಗಿಲ್ಡ್ ತುಳುಬಾಸೆ ಸಂಸ್ಕೃತಿ, ತುಳು ಸಂಪೊತ್ತುದ ಬುಳೆಚಿಲ್‌ಗಾದ್ ಅಕುಲೆ ಸೇವೆ ಸಂದ್‌ದಿತ್ತ್‌ಂಡ ಅಂಚಿನ ಪುಣ್ಯಾತ್ಮೆರೆನ ಬದ್ಕ್, ಸಾಧನೆಲೆನ್ ನೆಂಪುಡು ಒರಿತೊನುನವು ನಮ್ಮ ಧರ್ಮೊ, ಈ ನಿಲೆಟ್ ಕರಿದ್ ಪೋಯಿನಕುಲೆನ ಪುದರ್‌ಡ್ ಅಕಾಡೆಮಿ ಬೂಕುಲೆನ್ ಬರೆಪಾದ್ 'ಮದಪ್ಪೆರಾವಂದಿ ತುಳುವೆರ್' ಪನ್ಪಿ ಗ್ರಂತ ಮಾಲೆಡ್ ಬೊಳ್ಪುಗು ಕನವೊಂದುಂಡು.

ಬ್ಯಾಂಕಿಂಗ್ ತುಳುನಾಡ್ದ ಒಂಜಿ ಮಲ್ಲ ಉದ್ಯಮ. ದೇಸೊದ ಮಲ್ಲ ಮಲ್ಲ ಬ್ಯಾಂಕ್‌ಲಾಯಿನ ಸರಕಾರಿ ಸ್ವಾಮ್ಯ ಪಡೆಯಿನ ವಿಜಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್. ಕೆನರಾ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್ – ಉಂದು ಮಾತ ತುಳುನಾಡ್‌ಡೇ ಉದಿಪನ ಆಯಿನ ಬ್ಯಾಂಕ್‌ಲು. ಇತ್ತೆ ಖಾಸಗಿ ಆದುಪ್ಪಿನ ಮಲ್ಲ ಬ್ಯಾಂಕ್ ಪಂಡ ಕರ್ನಾಟಕ ಬ್ಯಾಂಕ್. ಅವುಲಾ ಮೂಲೇ ಪುಟ್ಟುಂಡು. ನೆಕ್ಕ್ ಪೂರ ತುಳುವೆರೆನ ಬುದ್ಧಿವಂತಿಕೆ ಬೊಕ್ಕ ಉಳಿತಾಯ ಸಂಸ್ಕೃತಿಯೇ ಕಾರಣ.

ವಿಜಯಾ ಬ್ಯಾಂಕ್‌ನ್ ಮಲ್ಲ ಸ್ತಿತಿಕ್ ಕೊನೊದು ಅಯಿನೊಂಜಿ ಅಂತಾರಾಷ್ಟ್ರೀಯ ಮಟ್ಟೊದ ಬ್ಯಾಂಕ್‌ಂದ್ ಮಲ್ತಿನಾರ್ ಮುಲ್ಕಿ ಸುಂದರ ರಾಮ ಶೆಟ್ರ್. ಬ್ಯಾಂಕ್‌ನ್ ಬುಳೆಪವುನೆದೊಟ್ಟಿಗೆ ತುಳುನಾಡ್‌ಗ್ ಅರೆಡ್ದಾದ್ ರಡ್ಡ್ ಉಪಕಾರೊಲಾತ. ತುಳುನಾಡ್ದ ಏತೋ ಜನ ಜವ್ವನೆರ್, ಜವ್ವಂದಿಯಲ್ಲು ಎಸ್.ಎಸ್.ಎಲ್.ಸಿ.ಯೋ ಪಿ.ಯು.ಸಿ.ಯೋ ಕಲ್ತ್‌ದ್ ಬಡಪೊತ್ತುಡ್ದಾವರ ದುಂಬುದ ಶಿಕ್ಷಣ ಸಾಧ್ಯ ಆವಂದೆ ಬೇಲೆದಾಂತೆ ಇಲ್ಲಾಲೇ ಕುಲ್ದಿತ್ತೆರ್. ಕೆಲವೆರ್ ಬೇಲೆಗಾದ್ ಊರೂರು ತಿರ್ಗೊಂದಿತ್ತೆರ್. ಆ ಪೊರ್ತುಗು ಅಂಚಿನಕುಲೆನ್ ಲೆತ್ತ್‌ದ್ ಬೇಲೆ ಕೊರಿನಾರ್ ಸುಂದರ ರಾಮ ಶೆಟ್ರ್, ಬಡವೆರ್, ಮಧ್ಯಮ ವರ್ಗೊದ ಈ ಜನೊಕುಲೆಗ್ ಬೇಲೆ ಕೊರ್ನಗ ಆರ್ ಅಕುಲೆಗ್ ಪ್ರವೇಶ ಪರೀಕ್ಷೆ ಮಲ್ತ್‌ಜೆರ್. ಅಕುಲು ಪರೀಕ್ಷೆಡ್ ದೆತ್ತಿನ ಮಾರ್ಕ್‌ನ್ ತೂಯಿಜೆರ್. ಬಜೀ

ಅಕುಲೆ ಶಿಕ್ಷಣ ಮಟ್ಟೊ ಬೊಕ್ಕ ಅಕುಲೆ ಕುಟುಮೊದ ಪರಿಸ್ಥಿತಿ ಈ ರಡ್ಡ್ ವಿಸಯೊಗು ಮಾತ್ರ ಮಾನ್ಯತೆ ಕೊರ್ಯೆರ್. ಇಂಚ ಬೇಲೆ ಕೊರ್ದ್ ಎಡ್ಡೆ ಸಂಬಳ ಕೊರ್ನೆಡ್ದಾವರ ತುಳುನಾಡ್ದ ಏತೋ ಕುಟುಮೊಲು ಬಡಪೊತ್ತುನು ಕಳೆವೊಂಡ. ತುಳುನಾಡ್ದ ಆರ್ಥಿಕ ಪರಿಸ್ಥಿತಿ ಸುದಾರ್ನೆ ಆಂಡ್. ಊರು ಉದ್ದಾರೊ ಆಂಡ್. ಬೇಲೆ ನಾಡೊಂದು ಮುಂಬಯಿಗ್ ರಟ್ಟುನ ಅಬ್ಬೆಸೊ ಉಂತುದೇ ಪೋಂಡು.

ಕುಡ ಒಂಜಿ ಆರೆಗ್ ತೆರಿಯಂದೆನೇ ಅರೆಡ್ದಾಯಿನ ಮಲ್ಲ ಕೆಲಸೊ ಪಂಡ ತುಳು ಬಾಸೆ, ಸಂಸ್ಕೃತಿದ ಬುಳೆಚಿಲ್. ಆರ್ ಮಲ್ಲ ಮನೆತನೊಟು ಪುಟ್ಟಿನಾರ್, ಕಲ್ತಿನಾರ್. ಪೊರ್ಲುಡು ಇಂಗ್ಲಿಷ್ ಪಾತೆರರೆ ಬರ್ಪಿನಾರ್. ಆಂಡ ಆರ್ ಅರೆ ಅಪ್ಪೆ ಬಾಸೆನ್ ಬುಡ್ಜೆರ್. ಅಧಿಕಾರಿಲು ಉಪ್ಪಡ್, ಬೇಲೆದಕುಲುಪ್ಪಡ್ ತುಳುತಕುಲೆಡ ಆರ ತುಳುವೇ ಪಾತೆರೊಂದಿತ್ತೆರ್. ಅಂಚಾದ್ ಆರ್‌ನ ತಿರ್ತ ಅಧಿಕಾರಿಲು ಕೆಲಸೊದಕುಲು ಪೂರ ಬ್ಯಾಂಕ್‌ಡ್ ತುಳುವೇ ಪಾತೆರೊಂದಿತ್ತೆರ್. ತುಳು ಪಾತೆರ್ಯರೆ ಅಕುಲೆಗ್ ಅಳುಕು ಇಜ್ಜಾಂಡ್.

ಕಾಶ್ಮೀರಡ್ದ್ ಪತ್ತಿನ ಕನ್ಯಾಕುಮಾರಿ ಮುಟ್ಟ ಬ್ಯಾಂಕ್‌ದ ಎಗ್ಗೆಲಿತ್ತ. ಪ್ರತಿ ಎಗ್ಗೆಡ್ಲಾ ಒರಿ ಇರ್ವೆರ್ ತುಳುವೆರ್ ಖಂಡಿತಾ ಉಪ್ಪೆದೆರ್. ಇಂಚ ತುಳು ಬಾಸೆ ದೇಸೊ ಇಡಿಯ ಪಸರನೆ ಆಂಡ್. ಸಂಸ್ಕೃತಿ ಬಾಸೆದ ಜೀಲೊ. ಬಾಸೆದೊಟ್ಟಿಗೆ ಸಂಸ್ಕೃತಿಲಾ ಒರಿದ್ ಬತ್ತ್ಂಡ್.

ಸುಂದರ ರಾಮ ಶೆಟ್ರ್ ಸಂಪೊತ್ತುಡು ಮಲ್ಲಾರ್. ಆಂಡ ಆ ಮಲ್ಲಾದಿಗೆನ್ ಆರ್ ಪಾಪದಕುಲೆಡ ತೋಜಾಯಿಜೆರ್. ಬಡವೆರೆನ ಬಗೆಟ್ ಆರೆಗ್ ಕರುಣೆ ಇತ್ತ್ಂಡ್. ತನ್ನ ಊರುದ ಬಗ್ಗೆ ಅಭಿಮಾನೊ ಇತ್ತ್ಂಡ್. ಊರುದ ಏತೋ ಲೇಸ್‌ಲೆಗ್ ಆರ್ ಬೆರಿಸಾಯೊ ಕೊರ್ಯೆರ್. ಜರಿಯೊಂದಿತ್ತಿನ ಕಟ್ಟೋಣಲೆನ್ ಲಕ್ಡ್ಂತಾಯೆರ್. ಊರುಗು ಉಪಕಾರ ಮಲ್ತಿನ ಮಲ್ಲ ಪುಣ್ಯಾತ್ಮೆ ಆರ್.

ಆರೆನ ಬಗೆಟ್ ಬೂಕುಬರೆದ್ ಕೊರೊಡುಂಡು ಪನ್ನಗ, ಆರೆನ ಬ್ಯಾಂಕ್‌ಡೇ ಬೇಲೆ ಬೆಂದ್‌ದ್ ನಿವೃತ್ತಿ ಪಡೆಯಿನ, ಆರ್ ಪುಟ್ಟಿನ ಊರುಡೇ ಪುಟ್ಟು ಬಳತಿನ ವಿದ್ವಾಂಸೆ ಶ್ರೀ ಎನ್.ಪಿ. ಶೆಟ್ರ್ ಬಾರಿ ಸಂತೋಸುಡು ಒತ್ತೊಂದು ಪೊರ್ಲು ಪೊಲಿಗೆಡ್ ಬರೆದ್ ಕೊರ್ತೆರ್. ಆಕೃತಿ ಪ್ರಿಂಟ್ಸ್‌ದ ಶ್ರೀ ಕಲ್ಲೂರು ನಾಗೇಶ್ ಬೊಕ್ಕ ಕೂಟೊದಕುಲು ಅಚ್ಚಿಮಲ್ತ್ ಕೊರ್ತೆರ್. ಮುಕುಲೆಗ್ ಉಡಲ್‌ದಿಂಜಿ ಸೊಲ್ಮೆ ಸಂದಾವೊಂದು ಸುಂದರ ರಾಮ ಶೆಟ್ರೆನ ಸಾದನೆ ಮಾತ ಜವ್ವನೆರೆಗ್ಲಾ ಸಾದಿತೋಜಾದ ಕೊರ್ಪುನಂಚನೆ ಆವಡ್. ಆರೆನ ಕೀರ್ತಿ ನನಲಾತ್ ಮಿತ್ತೇರಡ್ ಪಂಡ್‌ತ್‌ದ್ ಬಯಕೊನ್ವೆ.

ಪುತ್ತೂರು
20–4–2011

**ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**

# ಸುರುತ ಮದಿಪು

ಮುಲ್ಕಿ ಸುಂದರ ರಾಮ ಶೆಟ್ರ್ ಎಡ್ಡೆ ಮನೆತನೊಡು ಪುಟುದು, ಎಲ್ಲಿಡೇ ಇನ್ಸೂರೆನ್ಸ್ ಕಂಪನಿ ಸೇರ್ದ್ ತನ್ನ ಕಾರ್‌ಡ್ ತಾನ್ ಉಂತುದಿನಾರ್. ಬೊಕ್ಕ ವಿಜಯಾ ಬ್ಯಾಂಕ್‌ದ ಅಭಿವೃದ್ಧಿಗಾದ್ ಎಡೇನ ಪುಣೆತಿನಾರ್, ತುಳು ಸಮಾಜದ ಜವಣೆರೆಗ್ ಬ್ಯಾಂಕ್‌ಡ್ ಕೆಲಸ ಕೊರ್ದು ಸುಮಾರ್ ಪತ್ತ್‌ಸಾವಿರ ಕುಟುಮೊಲು ಆರೆನ್ ನಿತ್ಯ ನೆನಪುಲೆಕ್ಕ, ಐತ ಪರಿಣಾಮ ಇತ್ತೆ ಲಕ್ಷಾಂತರ ಜನೊಕು ಆಪಿನೆಕ್ಕ ಕಾರಣೆರಾತಿನಾರ್.

ಸುಂದರ ರಾಮ ಶೆಟ್ರ್ ಬ್ಯಾಂಕ್‌ಡ್ ಎಂಕ್‌ಲಾ ಕೆಲಸ ಕೊರ್ತೆರ್. ಆ ಋಣೊನು ಕಿಂಚಿತ್ತಾಂಡಲಾ ಈ ನಮೂನೆಡ್ ಸಂದಾವರೆ ತಿಕಿನ ಎನ್ನ ಒಂಜಿ ಭಾಗ್ಯ. ಅರೆನ ಬದ್ಕ್‌ದ ಪೂರಾ ಸಂಗತಿಲೆನ್ ನೆಟೆ ಒಟ್ಟು ಪಾಡರೆ ಇಡೆ ಇಜ್ಜಿ. ಸಮಯಲಾ ಇಜ್ಜಿ. ಭಾರಿ ಅಮಸರೊಡು ಉಂದೆನ್ ಬರೆವೊಡಾಂಡ್. ಈ ಕೃತಿದ ವ್ಯಾಪ್ತಿಗ್ ಒಂಜಿ ಮಿತಿಲಾ ಉಂಡು. ಅಂಚಾದ್ ಏತೊ ಸಂಗತಿಲು ನೆಟೆ ಬರಂದೆ ಉಪ್ಪು. ಮುಖ್ಯವಾಯಿನ ಕೆಲವು ಸಂಗತಿಲು ಮಾತ್ರ ನೆಗತ್ತ್ ತೋಜು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ 'ಮದಪ್ಪೆರಾವಂದಿ ತುಳುವೆರ್' ಪನ್ಪಿನ ಕೊಡಿಯಡಿಟ್ ತುಳುನಾಡ್‌ಗ್ ಬೇತೆ ಬೇತೆ ನಮೂನೆಡ್ ಸೇವೆ ಮಲ್ದಿನ ಹಿರಿಯರೆನ ಬದ್ಕ್‌ದ ಪರಿಚಯ ಮಲ್ತ್ ಕೊರೊಂದುಂಡು. ಪಣವುದ ಕ್ಷೇತ್ರೊಡು ಈ ಬ್ಯಾಂಕ್‌ದ ಅಧ್ಯಕ್ಷೆ ಆದ್, ಆ ಬ್ಯಾಂಕ್‌ನ್ ಮಿತ್ತ್ ಕಣತ್ದ್ ಐತ ಪ್ರಯೋಜನೊನು ತನ ಊರುದ ಜನೊಕುಲೆಗ್ ಎಡ್ಡೆ ಎಡ್ಡೆ ಕೆಲಸ ತಿಕ್ಕುನ ನಮುನೆಡ್ ಮಲ್ತ್ ಕೊರಿನ ಸುಂದರ ರಾಮ ಶೆಟ್ರ್‌ನ ಪುದರ್ ತುಳುನಾಡ್‌ಡ್ ಸ್ಥಿರವಾದ್ ಒರಿಯೊಡು. ದುಂಬುದ ಜನಾಂಗ ಅರೆನ್ ನೆನಪು ಮಲ್ಪೊಡು. ತನ ಊರುದಕುಲು ಓಲು ತಿಕ್‌ಂಡಲಾ ಆರ್ ತುಳುಟೇ ಪಾತೆರೊಂದಿತ್ತೆರ್. ತುಳುನಾಡ್‌ದ ಮಸ್ತ್ ಶಾಲೆ, ಕಾಲೇಜ್, ದೈವಸ್ಥಾನ, ದೇವಸ್ಥಾನೊಲೆನ ಜೀರ್ಣೋದ್ಧಾರೊಗು ಸಾಯ ಮಲ್ತ್‌ದೆರ್.

ಈ ಪುಸ್ತಕ ಬರೆಯರೆ ಎಂಕ್ ಪ್ರೋತ್ಸಾಹ ಕೊರಿನ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಬೊಕ್ಕ ತುಳು ಅಕಾಡೆಮಿದ ಸದಸ್ಯೆರೆನ್, ಅಕಾಡೆಮಿದ ರಿಜಿಸ್ಟ್ರಾರೆನ್ ಯಾನ್ ನೆನೆತೊನೊಡು. ವಿಷಯ ಸಂಗ್ರಹೊಗು ಸಾಯ ಮಲ್ತಿನ ಎನ್.ಎಸ್. ಸುಕುಮಾರ ಶೆಟ್ಟಿ, ಮುರಲೀಧರ ಭಂಡಾರಿ ಮುಲ್ಕಿ, ಅಶೋಕ ಕುಮಾರ ಶೆಟ್ಟಿ ಬೆಂಗಳೂರು (ಸುಂದರ ರಾಮ ಶೆಟ್ರೆನ ಮಗೆ) ಮೊಕಲೆಗ್ ಸೊಲ್ಮೆ ಸಂದಾವೆ.

ಮುಲ್ಕಿ
ಜನವರಿ 2011.

ಎನ್.ಪಿ. ಶೆಟ್ಟಿ

# ಅನ್ನದಾತೆ ಆಯಿನಾರ್

ವಿಜಯಾ ಬ್ಯಾಂಕ್‌ದ ಮುಖ್ಯ ಕಾರ್ಯಾಲಯ ದುಂಬು ಒಂತೆ ಸಮಯ ಇತ್ತಿನಿ ಬೆಂಗಳೂರುಡು ರೆಸಿಡೆನ್ಸಿ ರೋಡುದ "ಜನಾರ್ದನ್ ಟವರ್ಸ್" ಪನ್ಪಿನ ಬಿಲ್ಡಿಂಗ್‌ಡ್. 1976 ನೇ ವರ್ಸೊದ ಪೆರಾರ್ದೆ ತಿಂಗೊಲು. ಕಾರ್ಯಾಲಯದ ಎದುರು ಸೇರ್ದಿನ ಪತ್ತ್ ನೂದು ಜನ. ಅದಗನೇ ದೊರಿನ ಬರ್ಸೊ, ಪನಂದಿ ಬತ್ತಿ ಬಿನ್ನಲೆಕ್ಕೊ, ಕೆಲವೆರ್ಡ ಮಾತ್ರ ಕೊಡೆ, ಎಚ್ಚಿನಕುಲು ಚಂಡಿ. ಆವಂದಿಲೆಕ್ಕ ಮರತ ಅಡಿಟ್ ಉಂತಿಯೆರ್ಡಲಾ ನೀರ್‌ನ್ ಪೂರಾ ತಪ್ಪಾವೊನೊರೆ ಆಯಿಜಿ. ಸೇರ್ದಿನಕುಲು ಎಚ್ಚಿನಕುಲು ವಿಜಯಾ ಬ್ಯಾಂಕ್‌ಡ್ ಕೆಲಸೊಗಾತ್ರ ಬೈದಿನ ಜವಣ ಜವಂದಿಯೆರ್. ಅಕಲೆನ್ ಲೆಸೊಂದು ಬೈದಿನ ಕೆಲವೆರ್ ಪ್ರಾಯದಕುಲು, ಕೆಲವೆರ್ ಮಸ್ತ್ ಪರಬೆರ್.

ರೆಸಿಡೆನ್ಸಿ ರೋಡುಡು ಕಾರೊಂಜಿ ಬತ್ತ್‌ದ್ 'ಜನಾರ್ದನ ಟವರ್ಸ್' ದ ಎದುರು ಉಂತುಂಡು. ಅಯಿಡ್ದ್ ಪಿದಯಿ ಬತ್ತೆರ್ ಒರಿ ಬೊಲ್ದು ತುತ್ತೈತದ ಒರತೂಂಡ, ಕುಡವೊರ ತೂಪಿನಂಚಿನ, ಬೊಕ್ಕ ಏಪಲಾ ಮಾತ್‌ರ್ ಪೋವಂದಿನಂಚಿನ ಸರ್ತ, ಎತ್ತರದ ಪೊರ್ಲುಸುರ್ಪೊದ, ಆಜಾನುಬಾಹು ಜನ. ಅರೆನ ದಿಟ್ಟಿ ಮರತ ಅಡಿಕ್ ಪೋಂಡು. ಒಂಜಿ ಗಳ್ಗೆಡ್ ಆರ್ ಜನಾರ್ದನ ಟವರ್ಸ್‌ದ ಒಂಜಿನೆ ಮಾಳಿಗೆದ ತನ ಛೇಂಬರ್‌ದುಲಯಿ ಪೋಯೆರ್. ಪೋಯಿನಾರೆ ಅದಗ ತನ್ಕ್ ಪಿ.ಎ. ಆದಿತ್ತಿನ ಡಾ. ಶಂಕರ ಶೆಟ್ರೆನ್ ಲೆತ್ತ್‌ದ್ ಆರ್ಡ ಪಂಡೆರ್. "ತೂಲೆ ಆ ಮರತಡಿಟ್ ಚಳಿಕ್ ಕುಂಬರುನ ನಾಲ್‌ಜನ ಪರಬೆರೆನ್ ಇತ್ತೆನೆ ಇಡೆಗ್ ಲೆಸೊಂದು ಬಲೆ. ಈರೆ ಪೋಲೆ".

ಡಾ. ಶಂಕರ್ ಶೆಟ್ರ್ ಆ ನಾಲ್ ಜನ ಪರಬೆರೆನ್ ಸುಂದರ ರಾಮ ಶೆಟ್ರೆನ ಚೇಂಬರ್‌ಗ್ ಲೆಸೊಂದು ಬತ್ತೆರ್. ಸುಂದರ ರಾಮ ಶೆಟ್ರ್ ಅಕಲ್ನ ಸುಕಕಷ್ಟ ಕೇಂಡ್‌ದ್ ಅಕುಲು ದಾಯೆಗ್ ಬೈದುಪ್ಪೆರ್ ಪನ್ಪಿನೆನ್ ತಾನೆ ಅರ್ತೊ ಮಲ್ತೊಂದು ಅಕಲ್ನ ಪಾಸಾಡಿದ ಜವ್ವಣೆರೆನ್ ಲೆತ್ತ್‌ದ್ ಅರ್ಜಿನ್ ಗೆತೊಂದು ಅಕ್ಲೆಗ್ ಕೆಲಸ ಕೊರ್ಯೆರ್. ಒಂಜಿ ವಾರೊಡ್ದಿಂಚಿ ಈ ಜನೊಕುಲು ಸುಂದರ ರಾಮ ಶೆಟ್ರೆನ್ ಕಾತೊಂದು ಉಂತುದೆರ್. ದಿನೊಲಾ ಬತ್ತ್‌ದ್ ಪಿರ ಪೋವೊಂದಿತ್ತೆರ್. ತನ ಜೋಕುಲೆಗ್ ಕೆಲಸ ತಿಕ್‌ದ್, ಬದ್‌ಕ್‌ದ ತಾದಿ ನಾಡರೆ ಅಕುಲು ಬೈದಿತ್ತೆರ್. ಬೇತೆ ಕೆಲೊಸೊಡು ಉತ್ತರ ಭಾರತೊಗು ಪೋದಿತ್ತಿನ ಸುಂದರ ರಾಮ ಶೆಟ್ರ್ ಒಂಜಿ ವಾರೊಡು ಬೆಂಗಳೂರುಡು ಇತ್ತ್‌ಜೆರ್.

ಲೋಕೊಡು ಕೆಲಸೊಗು ಕಂಪನಿ, ಸಂಸ್ಥೆಲು, ಬ್ಯಾಂಕುಲು ಮಸ್ತ್ ಉಲ್ಲ, ಉಪ್ಪ. ಆಂಡ ಒಂಜಿ ಬ್ಯಾಂಕ್‌ನ್ ಒಂಜಿ ದಸಕೊಡ್ದುಲಾ ಎಚ್ಚ ಸಮಯೊಡು ಅಧ್ಯಕ್ಷೆ ಆದ್ ಆಳೋಂದು, ತಾನ್ ಲೆಪ್ಪಂದೆ ಅಕುಲಾದ್ ಬತ್ತಿನಕಲೆಗ್ ಕೆಲಸ ಕೊರ್ದ್ದು, ಬೇತೆ ಸಂಸ್ಥೆಲೆನ ಕೆಲಸ ಕೊರ್ಪಿನ ನಿಯಮೊಲೆನ್ ಮಾನವೀಯ ದೃಷ್ಟಿಡ್ ಮಾತ ಮೀರ್ದ್ದ್ ,ಏತೋ ಇಲ್ಲ್‌ಲೆಡ್ ಬೊಲ್ಪು ಸದಾ ಅರ್ಲ್ಲು ಲೆಕ್ಕ ಮಲ್ದಿನ ಮಾಮಲ್ಲ ಪುಣ್ಯಾತ್ಮೆ ಸುಂದರ ರಾಮ ಶೆಟ್ರ್. "ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್" ಪನ್ಪಿನ ಒಂಜಿ ಸಂಸ್ಥೆ ಉಂಡು. ಅವು ಸಾರ ಅರ್ಜಿ ಲೆತ್ತ್‌ಂಡ, ನೂದು ನಿಷ್ಠುರ ನಿಯಮೊಲೆನ್ ಒಡ್ಡಾದ್ ದಾಲ ಮೂಜಿ ಜನಕ್ ಕೆಲಸ ತಿಕ್ಕು, ಅತ್ತ್‌ಂಡ ಬೇತೆ ಬೇತೆ ಮಲ್ಲ ಕಂಪನಿಲು ಕೆಲಸೊಗು ಜನ ಬೋಡುಂದು ಲೆತ್ತ್‌ದ್ ಪತ್ತ್ ಜನೊಕು ಕೆಲಸ ಕೊರುವೆರ್. ತನಕಯಿತಲೆ ಕೆಲಸ ಕೇನೊಂದು ಬತ್ತಿನಾಯನ ಯೋಗ್ಯತೆಗ್ ತಕ್ಕ, ವಾ ಮುಲಾಜಿದಾಂತೆ ಕೆಲಸಕೊರ್ತಿನ ಇಂಚಿನ ನರಮಾನಿ ಬಹುಶಃ ಇದಮುಟ್ಟ ಪುಟಿದಿನಿಜ್ಜಿ, ನನ ಪುಟ್ಟೆರಿಜ್ಜಿ.

ಯಾನ್ ಮಿತ್ತ್ ಪನ್ಯ ಆ ನಾಲ್ ಪರಬೆರೆನ್, ಅಕಲೆ ಜೋಕುಲೆಗ್ ಕೆಲಸ ಕೊರ್ದ್ದು ಗೌರವೊಡು ಕಡಪುಡಿನ ಒಟ್ಟುಗು ಮರತಡಿಟ್ ಕಾದ್ ಉಂತುದಿನ ಎಣ್ಣತ್ತೈನ್ ಜವಣೆರೆಗೆ ಆನಿದ ದಿನ ಕೆಲಸ ಕೊರ್ತೆರ್‌ಗೆ. ಆ ವರ್ಸೊಡು (1976) ವಿಜಯಾ ಬ್ಯಾಂಕ್‌ದ ಮಸ್ತ್ ಪೊಸ ಎಗ್ಗೆಲು ಓಪನ್ ಆದ್ ಒಂಜಿಸಾರದ ಇರ್ನೂದು ಜನೊಕು ಸುಂದರ ರಾಮ ಶೆಟ್ರ್ ಕೆಲಸ ಕೊರ್ತೆರ್. ಅಯಿತ ದುಂಬುದ ವರ್ಸೊಡು (1975) ನೂತ್ತ ಐನ್ ಪೊಸ ಎಗ್ಗೆಲು ಉದಿಪನ ಆದ್, ಬ್ಯಾಂಕಿಂಗ್ ಚರಿತ್ರೆಡ್ ಒಂಜಿ ಪೊಸ ಅಧ್ಯಾಯ ಆರ್ ಬರೆದಿತ್ತೆರ್.

ವಿಜಯಾ ಬ್ಯಾಂಕ್‌ಡ್ ಮಸ್ತ್ ವರ್ಸೊ ಕೆಲಸ ಮಲ್ತ್‌ದ್ ಐತ ಜನರಲ್ ಮ್ಯಾನೇಜರ್ ಆದ್ ರಿಟೈರ್ಡ್ ಆಯಿನ ಡಾ. ಶಂಕರ ಶೆಟ್ರ್ ಸುಂದರ ರಾಮ ಶೆಟ್ರೆ ವಿಷಯ ಬರೆನಗ ಪನ್ಪೆರ್ "One of the greatest quality of late Sundarram Shetty, which was not realised and understood,

by many people was his sense of compassion, love and kindness to others." ಈ ಮನುಷ್ಯಗ್ ಬೇತೆಕಲೆ ಮಿತ್ತ್ ದಯೆ, ಪ್ರೀತಿ, ಕರುಣೆ ಏತ್‌ತ್ತ್‌ಂಡ್ ಪನ್ಪಿನ ಸಂಗತಿ ಮಸ್ತ್ ಜನೊಕು ಗೊತ್ತುಂಜ್ಜಾಂದೆ ಪೋಂಡು. ಕರುಣೆಡ್, ಪ್ರೀತಿಡ್, ಗೌರವೊಡು, ಉಪಕಾರ ಸ್ಮರಣೆಡ್ ಆರ್ ಮಸ್ತ್ ಜನೊಕು ಕೆಲಸ ಕೊರ್ತಿನಾರ್. ಅದಗ ಆರ್ ಜಾತಿ, ಧರ್ಮದ ಪರಿಧಿನ್ ಮೀರ್ದಿನಾರ್. ವಿಜಯಾ ಬ್ಯಾಂಕ್‌ಡ್ ಸುರು ಸುರುಟು ಬಂಟೆರ್ ವಂತೆ ಎಚ್ಚ ಇತ್ತ್‌ಂಡಲಾ – ಮಾತಾ ಜಾತಿದಕುಲಾ ಕೆಲಸೊಗು ಇತ್ತೆರ್. ತನ್ಕ್ ಕಲ್ಪಾಯಿನ ಮಾಸ್ಟ್ರನಕುಲು ಅಕುಲು ವೋವ್ವೆ ಜಾತಿದಕುಲಾದುಪ್ಪು. ಅಕುಲು ಪುದರ್ ಪಂಡ್‌ದ್ ಕಡಪುಡಿನ ಮಾತ ಜವ್ವನೆರೆಗ್ ಆರ್ ಕೆಲಸ ಕೊರ್ತೆರ್.

ಮುಲ್ಕಿ ಊರುಡು ಅರೆಗ್ ಪರಿಚಯ ದಾಂತಿನ, ಆಂಡ ಅರೆನ ವಿಷಯ ತೆರಿದಿನ ಒಂಜಿ ಪ್ರಾಯೊದ ಪೊಂಜೊವು ಅರೆಗೊಂಜಿ ಕಾಕಜಿ ಬರೇಂಡ್ " ಯಾನ್ಲಾ ಎನ್ನ ಒರ್ತಿ ಪುಲ್ಲಿಲಾ ಒಟ್ಟುಗುಲ್ಲಾ. ಎನ್ನ ಪುಲ್ಲಿ ಮೆಟ್ರಿಕ್ ಕಲ್ಪೊದುಲು. ಎಂಕಲೆಗ್ ಬದ್‌ಕರೆ ಬೇತೆ ದಾಲ ಉತ್ಪತ್ತಿ ಇಜ್ಜಿ. ಎನ್ನ ಪುಲ್ಲಿಗ್ ಈರೊಂಜಿ ಕೆಲಸ ಕೊರೊಡು. ಎಂಕಲೆನ್ ಬದುಕುಲೆಕ್ಕೊ ಮಲ್ಪೊಡು". ಸುಂದರರಾಮ ಶೆಟ್ರ್ ಮುಲ್ಕಿ ವಿಜಯಾ ಬ್ಯಾಂಕ್‌ದ ಮೆನೇಜರೆಗ್ ಫೋನು ಮಲ್ತ್‌ದ್ ಅರೆನ್ ಆ ಇಲ್ಲಡೆ ಕಡಪುಡಿಯೆರ್. ಅಲ್ತ ನಿಜ ಸ್ಥಿತಿನ್ ತೆರಿಯೊಂದು ಎಂಕ್ ತೆರಿಪಾವೊಡಿಂದೆರ್. ಮ್ಯಾನೇಜರ್ ಅಡೆ ಪೋದು ಇಸಯೊ ತೆರಿಯೊಂದು ರಿಪೋರ್ಟು ಕೊರಿಯೆರ್. ಪೊಣ್ಣಗ್ ಕೆಲಸ ತಿಕ್‌ಂಡ್. ಅಕಲೆಗ್ ಬದುಕುನ ಸಾದಿ ಆಂಡ್. ಬಹುಶಃ ಸುಂದರ ರಾಮ ಶೆಟ್ರ್ ಅತ್ತಾವಂದೆ ವಾ ನರಮಾನಿಲಾ ಈ ನಮುನೆಡ್ ಕೆಲಸೊಗು ಸಹಾಯ ಮಲ್ತಿನ ಚರಿತ್ರೆ ತಿಕ್ಕುನ ಕಷ್ಟೋ!

ಆರ್ ಪಂಜಿನಡ್ಕ ಸಾಲೆಗ್ ಪೋವೊಂದುಪ್ಪುನಗ ಎಲ್ಲಿಡ್ ಅರೆಗ್ ಬಾಜೆಲ್‌ಗ್ ಬೆಲ್ಲ ನೀರ್ ಕೊರ್ತಿನ ದೇವ್ರಾಯ ಕಾಮತೆರೆನ ನೆಂಪುಡು ಅರೆನ ರಡ್ಡ್ ಜೋಕುಲೆಗ್ ಕೆಲಸ ಕೊರ್ತೆರ್. ಮಿಶನ್ ಶಾಲೆದ ತನ ಟೀಚರೆನ ಮಗಲೆಗ್, ಮುಲ್ಕಿ ಮಸೀದ್‌ಡ್ 'ಮುಲ್ಲಾ' ಆದಿತ್ತಿನಾರೆನ ಜೋಕುಲೆಗ್ – ಇಂಚ ಜಾತಿ ಮತದ ಭೇದದಾಂತೆ ಬ್ಯಾಂಕ್‌ಡ್ ಕೆಲಸೊ ಕೊರ್ತೆರ್.

ಒಂಜಿ ಪಣವುದ ಸಂಸ್ಥೆಡ್ ಈತ್‌ಮಾತ ಜನಕ್ ಕೆಲಸ ಕೊರ್ಪಿನ ಮಾಮಲ್ಲ ಸಾಹಸೊ. ಐತ ಒಟ್ಟುಗು ನನಲಾತ್ ಜನೊನು ಸೇರಾವೊಂದು ಆ ಸಂಸ್ಥೆನ್ ಬುಲೆಪಾವುನ ಕೆಲಸೊ ನನ ಒಂಜಿ ಮಲ್ಲ ಸಾಹಸೊ. ಇಂಚಿನ ಸಾಹಸೊದ ಕತೆನೆ ಮುಲ್ಕಿ ಸುಂದರರಾಮ ಶೆಟ್ರೆನ ಚರಿತ್ರೆ. ಬೊಕ್ಕ ಆರ್ ಬುಲೆಯಿನ ಬುಲೆಪಾಯಿನ, ಇತ್ತೆ ಅಂತಾರಾಷ್ಟ್ರೀಯ ಮಟ್ಟೊಡು ಮೆನ್ಕೊಂದುಪ್ಪುನ ವಿಜಯಾ ಬ್ಯಾಂಕ್‌ದ ಕತೆಲಾ ಅಂದ್.

ವಿಜಯಾ ಬ್ಯಾಂಕ್‌ದ ಡೈರೆಕ್ಟರ್ ಆದಿತ್ತಿನ ಮುಲ್ಕಿ ಸುಂದರ ರಾಮ ಶೆಟ್ರ್ 1962ಟ್ದ್ ಐತ ಸಂಪರ್ಕೊಗು ಬತ್ತೆರ್. ಆಲ್ತ್ ಬೊಕ್ಕ 1968 ಡ್ದು 1979 ಮುಟ್ಟ ಐತ

ಚೇರ್‌ಮ್ಯಾನ್ ಆದ್ ಸರ್ವಾಂಗೀಣ ಸಾಧನೆಗ್ ತಾದಿ ತೋಜಾಯೆರ್. 1946ಡ್ದಿಂಬಿ ಅರೆಗ್ ಈ ಬ್ಯಾಂಕ್‌ದ ಒಟ್ಟುಗು ಸಮ್ಮಂದ ಇತ್ತ್‌ಂಡ್. ನಡುಟು 1949–51 ತ್ತ ಒಂಜರೆ ವರ್ಸೊ ಆ ಸಮ್ಮಂದ ತತ್ತ್ ಪೋತುಂಡು. ಅವ್ವೆನ್ ಬುಡುಂಡ ಅರೆನಾಲಾ ಈ ಬ್ಯಾಂಕ್‌ದಲಾ ಸಮ್ಮಂದ ಬಾರೀ ಪಿರ್ತಿದ. ಬಾರೀ ಪಿರವುದ; ಬೊಕ್ಕ ಬಾರೀ ಅರಂಗಣಿಗೆದ (ಸುಮಾರ್ 17 ವರ್ಸೊದ). 1962 ನೇ ಇಸವಿಡ್ ನೆತ್ತ ಪರಿಸ್ಥಿತಿ ಚಿಂತಾಜನಕವಾದ್ತ್‌ದ್ ಉಂದೊಂಜಿ ಮುರ್ಕುನ ಓಡದ ಲೆಕ್ಕ ಇತ್ತ್‌ಂಡ್. ಸುಂದರ ರಾಮ ಶೆಟ್ರೆನ ಧೈರ್ಯ, ಸಾಹಸ, ವ್ಯವಹಾರ ಸಂಬಂಧ, ವಾ ನಮುನೆಡಾಂಡಲ ಉಂದೆನ್ ಒರ್ತೊನೊಡು ಪನ್ಪಿನ ಏಕಾಗ್ರತೆಡ್, ಬೊಕ್ಕ ಪುಣೆಪಾಟಿಗೆಡ್ ಬ್ಯಾಂಕ್ ಒರೀಂಡ್. ಒರಿನೆನೇ ಆತ್ತ್ ಲಕ್ಷಾಂತರ ಜನೊತ ಬದ್‌ಕ್‌ಗ್ ಆಧಾರ ಆಂಡ್. ದೇಶ ವಿದೇಶೊಲೆಡ್ ಇನಿ ಪುದರ್ ಮಲ್ತ್‌ಂಡ್.

## ಪುಣ್ಯದ ಮಣ್ಣ್ ಮುಲ್ಕಿ

ಮುಲ್ಕಿ ಸಾವಂತ ಅರಸೆರ್ ಆಳ್ದಿನ ಎಡ್ಡೆ ಪುದರ್‌ದ ಊರು. ಪಿರಾಕ್‌ದ ಕಾಲೊಡು ಮೂಲು ಬಂದರ್ ಇತ್ತ್‌ಂಡ್‌ಗೆ. ಈ ಬಂದರ್‌ದ ಮೂಲಕ ಅರಬ್ ದೇಸೊಲೆಡ, ಗ್ರೀಕ್ ದೇಸೊಲೆಡ ವ್ಯಾಪಾರ ಸಮ್ಮಂದ ಇತ್ತ್‌ಂಡ್. ಶಿಮಂತೂರು ಸಾವಂತ ಅರಸೆರೆನ ಮುಲ್ಕಿದ ರಾಜಧಾನಿ ಆದ್ತ್‌ಂಡ್, ಶಿಮಂತೂರು, ಮುಲ್ಕಿ ಪರಿಸರೊಡ್ದು ಎಡ್ಡೆ ಜಾತಿದ ಅರಿ 'ಮಸ್ಕತ್'ಗ್ ರಫ್ತ್ ಅವೊಂದಿತ್ತಿನೆಡ್ದಾವರ ಮುಲ್ತ ಒಂಜಿ ಜಾತಿದ ಅರಿಕ್ 'ಮಸ್ಕತಿ' ಇಂದೇ ಪುದರ್ ಬೈದ್‌ಂಡ್. ಈ ಮುಲ್ಕಿದ ಬಂದರ್‌ಡ್ ಅಂಚಿಂಚಿ ಪೋಪಿನ ಓಡೊಲೆಗ್ "ಮೂಲಿ" (Tax) ವಸೂಲಿ ಮಲ್ಪುನ ಒಂಜಿ ಜಾಗೆ ಇತ್ತ್‌ಂಡ್. ಅಂಚಾದೆ ಊರುಗು "ಮುಲ್ಕಿ" ಪನ್ಪಿನ ಪುದರ್ ಬತ್ತ್‌ಂಡ್ ಇಂದ್‌ದ್ ಕೆಲವೆರೆನ ಅಭಿಪ್ರಾಯ. ಮುಲ್ಕಿದ ಲಿಂಗಪ್ಪಯಕಾಡ್‌ಡ್ ಮಸ್ತ್ ನಮುನೆದ ಗಿಡ ಮೂಲಿಕೆಲು (ಮರ್ದದ ಗಿಡೊಕುಲು) ಇತ್ತಿನೆಡ್ದಾವರ ಊರುಗು (ಮೂಲಿಕೆ)"ಮುಲ್ಕಿ" ಪನ್ಪಿನ ಪುದರ್ ಬತ್ತ್‌ಂಡ್ ಪಂಡ್‌ದ್ ನನೊಂಜಿ ವಾದ. ಇತ್ತೆ ಇತ್ತಿನ ಮುಲ್ಕಿ – ಕಾರ್ನಾಡ್‌ನ್ ಸುತ್ತು ಪಾಡೊಂದು ಪರಪುನ ಶಾಂಭವೀ ಸುದೆ ಅಪಗ ಅಯಿಟ್ಟೈಟೆ ಕೆಲವು ಕುದುರುಲೆನ ಸುಟ್ಟಿ ಮಲ್ತ್ ದಿತ್ತಂಡ್, ಕೆಲವು ಕವಿಕುಲು ಉಂದೆನ್ "ಮೂಲಿಕಾಪುರ" ಪಂಡ್‌ದ್ ಪಂತೆರ್. ಮುಲ್ಕಿ ಶೀಮಂತೂರುಡು ಆದಿ ಜನಾರ್ದನ ದೇವಸ್ಥಾನ ಉಂಡು. ಅವು ಸುಮಾರ್ ಪದ್‌ರಾಡನೆ ಶತಮಾನೊದ. ಮುಲ್ಕಿ ಸಾವಂತ ಅರಸೆರೆನ ಪಟ್ಟದ ಲಾಂಛನ ಆದ್ ಈ ಜನಾರ್ದನ ದೇವೆರೆನ ಗುರುತೊ., ಶೀಮಂತೂರುಡ್ದು ರಾಜಕೀಯ ಕಾರಣೊಗಾತ್ರ ಅರಸುಲು ಮುಲ್ಕಿದ

ಒಳಲಂಕೆಗ್ ರಾಜಧಾನಿನ್ ಕಣತೆರ್. ಮುಲ್ಕಿದ ಬಪ್ಪನಾಡ್‌ಡ್ ಇತಿಹಾಸ ಪ್ರಸಿದ್ಧ ದುರ್ಗಾಪರಮೇಶ್ವರೀ ದೇವಾಸ್ಥಾನ ಉಂಡು. ಈ ದೇವಸ್ಥಾನೊಗು ಮುಲ್ಕಿದ ಒಂರ್ಬ ಮಾಗಣೆಡ್ದ್ ಭಕ್ತೆರ್ ಸಮ್ಮಂದ ದೀತೆರ್. ಇಂಚಿನ ಮುಲ್ಕಿ ಊರು ಕಿನ್ಯಾಂಡಲ ಮಸ್ತ್ ಜನ ಕೀರ್ತಿವಂತೆರೆಗ್ ಜನ್ಮ ಕೊರಿನ ಪುಣ್ಯದ ಮಣ್ಣ್.

ಕೆನರಾ ಬ್ಯಾಂಕ್ ಸ್ಥಾಪನೆ ಮಲ್ದಿನ ಅಮ್ಮೆಂಬಳ ಸುಬ್ರಾಯ ಪೈ, ಸಿಂಡಿಕೇಟ್ ಬ್ಯಾಂಕ್‌ದ ನಿರ್ಮಾತೃ ಟಿ. ಎಮ್.ಎ. ಪೈ, ಕಾರ್ಪೊರೇಶನ್ ಬ್ಯಾಂಕ್‌ದ ಏಳಿಗೆಗ್ ಪೊಂರ್ಬುದಿನ ಎಮ್. ಆರ್. ಕಾಮತ್ ಮೊಕುಲು ಮಾತ ಮುಲ್ಕಿದಕುಲೆ. ದೇಶ ಭಕ್ತೆ ಕಾರ್ನಾಡು ಸದಾಶಿವ ರಾಯೆರ್, ಕಾರ್ನಾಡ್ ಮುಲ್ಕಿದಾರ್. ಸ್ವಾತಂತ್ರ್ಯ ಹೋರಾಟಗಾರೆ ರಾಮಕೃಷ್ಣ ಪೂಂಜೆರ್ ಮುಲ್ಕಿದಾರ್. ನನಲಾ ಅನೇಕಾನೇಕ ಮಹನೀಯೆರ್ ಪುಟುದಿನ ಊರು ಉಂದು. ಕಾರಣೀಕ ಪುರುಷೆರ್‌ಂದ್ ಪುದರು ಪೋತಿನ ಜನಪದ ವೀರೆರ್ ತುಳುನಾಡ್‌ದ ಕೋಟಿ ಚೆನ್ನಯೆರೆಗ್ ಸರಿ ಸಮಾನ ಇತ್ತಿನ ಕಾಂತಾ ಬಾರೆ ಬೂದಬಾರೆಲಾ ಮುಲ್ಕಿ ಒರುಂಬ ಮಾಗಣೆದಕುಲು.

ಒಂಜಿ ಕಾಲೊಡು ಅಂತಾರಾಷ್ಟ್ರೀಯ ಮಟ್ಟದ ವ್ಯಾಪಾರ ಕೇಂದ್ರ ಆದಿತ್ತಿನ ಈ ಮುಲ್ಕಿದ ಜನೊಕುಲೆಗ್, ದೇಶ ಕಟ್ಟೊಡಾಂಡ ದುಡ್ಡುದ ಅಗತ್ಯವುಂಡು, ದುಡ್ಡು ಒಟ್ಟಾವೊಡ್ಡ ಅವ್ವೆನ್ ನಮ ಒರಿತೊಂದು ಬರೊಡು, 'ಹನಿಗೂಡಿ ಹಳ್ಳ' 'ಹಿಡಿಕೂಡಿ ಮುಡಿ' ಪನ್ಪಿ ಗಾದೆಲೆನ ಲೆಕ್ಕ ; ಪತ್ತ್ ಜನ ಒಂತೊಂತೆ ಒರಿತೆರ್ಡ್‌ಲಾ ಮಸ್ತ್ ದುಡ್ಡು ಒರಿವುಂಡು. ಇಂಚಿನ ದುಡ್ಡು ಬಂಡವಾಳ ಉಪ್ಪುನ ಬ್ಯಾಂಕ್‌ನ್ ನಮ ಕಟ್ಟೊಡು, ಬೆಳಗಾವೊಡು ಈ ಮೂಲಕ ದೇಸೊ ಕಟ್ಟೊಡು ಪನ್ಪಿನ ಕಳಕಳಿ ಇತ್ತ್‌ಂಡ್.

ಉಡುಪಿ, ಮುಲ್ಕಿ, ಮಂಗಳೂರು (ಕುಡ್ಲ) ಈ ಮೂಜಿ ಊರುಲು ದೇಸೊದ ಮಲ್ಲ ತಾದಿದ ( ರಾಷ್ಟ್ರೀಯ ಹೆದ್ದಾರಿ) ನಡುಟುತ್ತಿನ ಊರುಲು. ಉಡುಪಿ ಬಡಕಾಯಿಡ್ದ್, ಕುಡ್ಲ ತೆನ್ಕಾಯಿಡ್ದ್, ಮುಲ್ಕಿಡ್ದ್ ಮುಪ್ಪ ಕಿ. ಮೀ. ಅಂಚಿಂಚಿ ಉಲ್ಲ. ಈ ಊರುಲೆಡ್ ಸುಮಾರ್ ಇರ್ವತ್ತ ಮೂಜಿ ಬ್ಯಾಂಕುಲು ಪುಟುದ. ಐಟ್ ನಾಲ್ ಬ್ಯಾಂಕುಲು ಮಸ್ತ್ ಪುದರ್ ಕಣತ್‌ದ್ ಇತ್ತೆ ರಾಷ್ಟ್ರೀಯ ಮಟ್ಟೊಡು ರೈಸೊಂದುಪ್ಪುನವು. ಐಟ್ ಸುಂದರಾಮ ಶೆಟ್ರ್ ಬುಲೆಪಾಯಿನ ವಿಜಯಾ ಬ್ಯಾಂಕ್‌ಲಾ ಒಂಜಿ. ದೇಸೊದ ಏತೊ ಜಾಗೆಡ್ 'ಬ್ಯಾಂಕ್' ಪನ್ನಗ ಎಂಚಿನಂದೇ ತೆರೆಯಂದಿ ಕಾಲೊಡು ದಕ್ಷಿನ ಕನ್ನಡದ ಜನೊಕುಲು ಎಡ್ಡೆ ವ್ಯವಹಾರ ಜ್ಞಾನ ತೆರಿದಿತ್ತೆರ್. ಒವ್ವೇ ಉದ್ಯಮ ಸ್ಥಾಪನೆಗ್ ದುಡ್ಡುದ ಅಗತ್ಯ ಇತ್ತಿನೆನೆ ತೆರಿಯೆರ್. ದುಡ್ಡುನು ಒಟ್ಟು ಮಲ್ಪುನ ಮಾಧ್ಯಮನೇ ಪಣವುದ ಸಂಸ್ಥೆ (ಬ್ಯಾಂಕ್) ಪಂಡ್‌ದ್ ತೆರಿಯೆರ್. ಬ್ಯಾಂಕ್‌ಲೆನ್ ತಾಪನೆ ಮಲ್ತೆರ್.

ಮುಲ್ಕಿಡ್ 'ಮುಲ್ಕಿ ಬ್ಯಾಂಕ್' ಪಂಡ್‌ದೊಂಜಿ ಬ್ಯಾಂಕ್ ಇತ್ತ್‌ಂಡ್. ಅವ್ವೆನ್ ಸ್ವಾತಂತ್ರ್ಯ ಸೇನಾನಿಯಾದಿತ್ತಿನ ರಾಮಕೃಷ್ಣ ಪೂಂಜೆರ್ ಸುರು ಮಲ್ತ್‌ತ್ತೆರ್. ಆ ಬ್ಯಾಂಕ್ ಬೊಕ್ಕ ಸಿಂಡಿಕೇಟ್ ಬ್ಯಾಂಕ್‌ದೊಟ್ಟುಗು ಸೇರೊಂಡು.

ಮುಲ್ಕಿದ ಒರುಂಬ ಮಾಗಣೆಡ್ ಅರಸೊಲೆನ್ ಬಡುಂಡ ಭಾರಿ ಪ್ರಸಿದ್ಧ ಮನೆತನ ಕಕ್ವ ಗುತ್ತು. ಬಪ್ಪನಾಡ್ ದೇವಸ್ಥಾನದ ರಕೋಳಿಗೆ ತೂಪಿನ ಜವಾಬ್ದಾರಿ ಈ ಇಲ್ಲದ ಮಿತ್ತ್ ಬೂರುಂಡು. ಯಾನ್ ದುಂಬೇ ಪಂಡಿಲೆಕ್ಕ ಕಾಳಪ್ಪ ಶೆಟ್ರ್, ದಾಸ ಶೆಟ್ರ್‌ನಕಲಂಚಿ ಮಹಾತ್ಮೆರ್ ಆ ಇಲ್ಲಡ್ ಪುಟಿಯೇರ್. ಅವ್ವೇ ಪರಂಪರೆಡ್, ಅವ್ವೇ ಇಲ್ಲಡ್ ಪುಟಿನಾರ್ ಸುಂದರ ರಾಮ ಶೆಟ್ರ್. ಪುದರ್‌ದಂಚೆನೆ ತೂಪಿನಕುಲು ನನ ಒರ ತೂಪಿ ಲೆಕ್ಕಂತಿನ ರೂಪದಾರ್, ಆ ರೂಪೊಗು ತಕ್ಕ ಸಾಹಸೊಡು ಮೆರೆಯಿನಾರ್.

## ಪುಟ್ಟು – ಬರವು

ಕಕ್ವ ಗುತ್ತು ಪನ್ನಗ ಮುಲ್ಕಿಡ್ ಒಂಜಿ ರಾಜ ಮರ್ಜಿದ ಇಲ್ಲ್. ಮುಲ್ಕಿದ ಒರ್‌ಂಬ ಮಾಗಣೆಡ್ ಅಕಲ್ನ ಆಸ್ತಿ ಪಾಸ್ತಿ ಪಸೆರ್ದ್ ಒಕ್ಕೆಲ್‌ದಕುಲು ಬೆನೊಂದಿತ್ತೆರ್. ಕಾಳಪ್ಪ ಶೆಟ್ರ್ ಕಕ್ವ ಗುತ್ತುದ ಪರಂಪರೆಡ್ ಪುದರ್ ಪಡೆಯಿನ ಯಜಮಾನೆ. ಒರುಂಬ ಮಾಗಣೆಡ್ ಪಸೆರ್ದಿನ ಮಾತ ದೈವಸ್ಥಾನೊಲೆಡ್ ಅಂಕ, ಆಯನ, ಕೋಲ, ಬಲಿ ಆನಗ ಬೂತ ಸುರು ಲೆತ್ತೊಂದಿತ್ತಿನೆ ಕಕ್ವ ಗುತ್ತಿನಾರೆನ್. ಆರೆಗೊಂಜಿ ಆಸನ ಅವುಲು ಪ್ರತ್ಯೇಕವಾದ್ ದೀವೊಂದಿತ್ತೆರ್. ಆರ್ ಕಾರಣಾಂತೊರೊಡು ಕೋಲೊಗು ಬತ್ತ್‌ಜೆರ್ಡ ಬೇತೆ ಏಲರ್ಾ ಅಯಿಟ್ ಕುಲ್ಲು ಲೆಕ್ಕ ಇಜ್ಜಿ. ಆ ಸ್ಥಾನೊಗು ಆತ್ ಮಾನಾದಿಗೆ.

ಕಕ್ವ ಗುತ್ತು ಉಪ್ಪರಿಗೆದ ಮಲ್ಲ ಇಲ್ಲ್. ನಾಲ್ ಸುತ್ತಲ ಪಸೆರ್ದಿನ ಪಚ್ಚೆ ಪೈರ್. ಎಚ್ಚಿನ ಆಸ್ತಿ, ಸಾಗೋಳಿ ಮಲ್ಪುನಕುಲು ಒಕ್ಕೆಲಕುಲು. ಗೇಣಿ ದನಿಕೇ ಅತ್ತ್ ಐತ ವಂತೆ ಅಂಶ ಬಪ್ಪನಾಡ್ ದೇವಸ್ಥಾನೊಗು ಪಾಡೊಡು. ಅಂಚಾಂಡ ಮಾತ್ರ ಗೇಣಿಗ್ ರಸೀದಿ. ಬಪ್ಪಾನಾಡ್ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮುಕ್ತೇಸರೆ ಆದ್ ಕಕ್ವ ಗುತ್ತು ಕಾಳಪ್ಪ ಶೆಟ್ರ್ ಧಾರ್ಮಿಕ ಬೊಕ್ಕ ಸಾಮಾಜಿಕ ಕೆಲಸೊಲೆನ್ ಮಸ್ತ್ ಮಲ್ತೆರ್. ದೇವಸ್ಥಾನದ ಪೂಜೆ ಪುರಸ್ಕಾರೊಲೆಗ್ ಬೋಡುತ್ತಿನ ಆದಾಯ ಬರ್ಪಿಲೆಕ್ಕ, ಉತ್ಸವೊಲು ಗೌಜಿಡ್ ನಡಪುಲೆಕ್ಕ ಆರ್ ಮಲ್ದಿನ ಯೋಜನೆಲು ಒಂಜಿರಡ್ಡತ್ತ್. ಕಾಳಪ್ಪ ಶೆಟ್ರೆಡ್ದ್ ಬೊಕ್ಕ ಆರೆನ ಅರುವತ್ತೆ ದಾಸು ಶೆಟ್ರ್‌ಲಾ ಈ ದೇವಸ್ಥಾನದ ಮುಕ್ತೇಸರೆ ಆದ್ ಬಾರೀ ಪುದರ್ ಕಣದಿನಾರ್. ಮಸ್ತ್ ಧಾರ್ಮಿಕ ಕೆಲಸ ಮಲ್ದಿನಾರ್. ಇಂಚಿನ ಇಲ್ಲಡ್ ಇಡೀ ದೇಸೊಗೂ ಬೊಲ್ಪು ಕೊರ್ದು ಲೋಕೊಡೇ ಪುದರ್ ಪಸೆರ್ಪಾವುನ ಬಾಲೆ ಪುಟ್ಟಿನ ಒಂಜಿ ವಿಚಿತ್ರ ದಾಲಾ ಅತ್ತ್!. ಕಕ್ವ ಗುತ್ತು ಉಮ್ಮಕ್ಕ ಶೆಡ್ತಿ ಬೊಕ್ಕ ನಿಟ್ಟೆ ಗುತ್ತು ಬೆರ್ಮು ಅಡ್ಯಂತಾಯ ಮೊಕಲೆನ (1793–1872) ಐನನೇ ಮಗಲ್ ಕಾವೇರಿ ಶೆಡ್ತಿರೆನ್ ನಿಟ್ಟೆ ಗುತ್ತು ನಾರಾಯಣ ಅಡ್ಯಂತಾಯೆರೆಗ್ ಕೊರುದು ಮದ್ಮೆ ಮಲ್ತ್‌ತ್ತೆರ್ (1824–1913). ಮೊಕಲೆ ಮಗಲ್ ಸಿಂಧು ಶೆಡ್ತಿನ್ ಶಿರ್ವ ಪೊಸಲ್ಲ ನಾಗಪ್ಪ ಶೆಟ್ರೆಗ್ ಕೊರ್ದುತ್ತೆರ್

(1852–1937). ಮೊಕಲ್ನ ಮೋಕೆದ ಮಗಳ್ ಸೀತಮ್ಮ ಶೆಡ್ತಿನ್ ದೊಡ್ಡಮನೆ ಮುದ್ದಣ್ಣ ಶೆಟ್ರ್‌ಗ್ ಮದ್ಮೆ ಮಲ್ತ್ ಕೊರ್ತೆರ್ ( 1889–1983). ಅಕಲ್ನ ಮಗೆಯಾದ್ ಜನ್ಮೊಗು ಬತ್ತಿನಾರ್ ಸುಂದರ ರಾಮ ಶೆಟ್ರ್, ಕಾಳಪ್ಪ ಶೆಟ್ರೆನ ಪುಲ್ಲಿನ ಮಗೆ. ದಾಸಪ್ಪ ಶೆಟ್ರೆನ ಮರ್ಮಲೆನ ಮಗೆ (ಪುಲ್ಲಿ).

ಕಕ್ವ ಗುತ್ತು ಅಳಿಯ ಸಂತಾನ ಕಟ್ಟ್‌ದ ಇಲ್ಲ್. ಅಂಚಾದ್ ಆರೆನ ಅಪ್ಪೆಲ್ಲಾಯಿ ಕಕ್ವ ಗುತ್ತುದ ಪುದರೇ ಅರೆನ ಪುದರ್‌ದೊಟ್ಟುಗು ಕೂಡುದು ಬತ್ತ್‌ಂಡ್. ಸೀತಮ್ಮಗ್ ಆಣ್‌ಗ್ ಆಣ್‌ಲಾ, ಪೊಣ್ಣುಗು ಪೊಣ್ಣುಲಾ ಆದ್ ಒರಿಯೇ ಮಗೆ ಸುಂದರ ರಾಮ ಶೆಟ್ರೆ. 1915 ಎಪ್ರಿಲ್ ಮುಪ್ಪನೇ ತಾರೀಕ್‌ಗ್ ಜನ್ಮೊಗು ಬತ್ತೆರ್.

ಕಕ್ವ ಗುತ್ತು ದಿಂಜಿದಿ ಇಲ್ಲ್. ಸೀತಮ್ಮಗ್ ಆಜಿ ಜನ ತಂಗಡಿ, ಪಲಿಯಲ್ಲು ಅಕುಲು ಬರೊಂದು ಪೋವೊಂದು ಇತ್ತೆರ್. ಸುಂದರ ರಾಮ ಶೆಟ್ರ್ ಎಲ್ಲಿಡ್ ಈ ಇಲ್ಲಡೇ ಇತ್ತೆರ್ಡಲಾ ಆರ್ ಸುರುತ ರಡ್ಡ್ ವರ್ಸೊ ಸಾಲೆ ಕಲ್ದಿನಿ ಕಾರ್ಲಡ್ (ಕಾರ್ಕಳ) ಅವುಲು ಅರೆನ ಚಿಕ್ಕಮ್ಮ ಕೃಷ್ಣ ಶೆಡ್ತಿನ ಇಲ್ಲಾಡ್ದ್  ಸಾಲೆಗೆ ಪೋವೊಂದಿತ್ತೆರ್. ಈ ನಡುಟು ಅರೆನ ಅಮ್ಮೆರ್ ತೀರ್ ಪೋಯೆರ್. ಅಂಚಾದ್ ಸೀತಮ್ಮ ಕಂಡನಿ ಇಲ್ಲಾಡ್ದ್ ತನ್ನ ಅಪ್ಪೆಲ್ಲಾಯಿನ ಕಕ್ವ ಗುತ್ತುಗು ಅಳಿಯ ಸಂತಾನ ಕಟ್ಟ್‌ದ ರಿವಾಜಿದ ಲೆಕ್ಕ ಬತ್ತೆರ್. ಸುಂದರ ರಾಮ ಶೆಟ್ರ್‌ಲಾ ಒಟ್ಟುಗಿತ್ತೆರ್.

ಕಕ್ವ ಗುತ್ತುದ ಕೈತಾಲ್ ಕೊಲಕಾಡಿ ಡೊಂಜಿ ಪೊಸ ಸಾಲೆ ಅದಗನೆ ಸುರುವಾಂಡ್. ಸುಂದರ ರಾಮ ಶೆಟ್ರ್ ಆ ಸಾಲೆ ಸೇರ್ದ್, ಮೂಜಿನೆ ಬೊಕ್ಕ ನಾಲನೇ ಕ್ಲಾಸ್‌ದ ವಿದ್ಯೆ ಕಲ್ತೆರ್. ಕೊಲಕಾಡಿದ ಈ ಸಾಲೆಗ್ 'ಪದ್ಮನಾಭ ಸರ್ವೊತ್ತಮ ಕಾಮತ್ ಪ್ರೈಮರಿ ಶಾಲೆ ಪಂಡ್ದ್ ಪುದರ್. ಪದ್ಮನಾಭ ಸರ್ವೊತ್ತಮ ಕಾಮತೆರ್ ಸುಂದರ ರಾಮ ಶೆಟ್ರ್‌ಗ್ ಬರವು ಕಲ್ಪಾಯಿನ ಗುರು. ಈ ಸಾಲೆದ ಕಲ್ಪಾಟಿಗೆಡ್ ಆರ್ ಶಿಕ್ಷಣದ ಬೇರ್‌ನ್ ಗಟ್ಟಿ ಮಲ್ತೊಂಡೆರ್. ಬೊಕ್ಕ ಮುಲ್ಕಿ ಮಿಶನ್ ಸಾಲೆಗ್ ಸೇರ್ದ್ ಏಳನೇ ಕ್ಲಾಸ್ ಮುಟ್ಟ ಕಲ್ತೆರ್. ಆ ಸಾಲೆಲೆನ ಮಾಸ್ತರ್‌ನಕಲೆನ್ ಸುಂದರ ರಾಮ ಶೆಟ್ರ್ ಸದಾ ನೆನೆತೊಂದಿತ್ತೆರ್. ಮಿಶನ್ ಸಾಲೆದ ಭೋಜರಾವ್ ಪನ್ಪಿನಾರ್ ಮೆರೆಗ್ ಇಂಗ್ಲೀಷ್ ಕಲ್ಪಾಯೆರ್. ಎಲ್ಲಿಡೇ ಆರೆಗ್ ಇಂಗ್ಲೀಷ್ ಬಾಸೆದ ಮಿತ್ತ್ ಎಡ್ಡೆ ಪ್ರಭುತ್ವ ಇತ್ತ್‌ಂಡ್.

ಕುಡ್ಲದ ಸೈಂಟ್ ಎಲೋಸಿಯಸ್ ಹೈಯರ್ ಸೆಕೆಂಡರಿ ಶಾಲೆಗ್ ಸೇರ್ದ್ ತನ ಸಾಲಾ ಶಿಕ್ಷಣೊನು ದುಂಬೊತ್ತೊಂಡೆರ್. ಆರೆನ ದೊಡ್ಡಮ್ಮ ರಾಧಕ್ಕ ಬೊಕ್ಕ ನೇಲ್ಯಮ್ಮೆರ್ ಸುಬ್ಬ ರೈಕುಲು ಕುಡ್ಲಡ್ ಇತ್ತೆರ್. ಸುಬ್ಬ ರೈಕುಲು ಮದ್ರಾಸ್ ಪೋಲಿಸ್ ಡಿಪಾರ್ಟ್‌ಮೆಂಟ್‌ಡ್ ಕೆಲಸ ಮಲ್ತೊಂದಿತ್ತೆರ್. ಆರೆನ ಮಾಮಲಾ ಕುಡ್ಲದ ಅದಗದ ತಹಶೀಲ್ದಾರ್ ಆದ್ ಇತ್ತೆರ್‌ಗೆ. ಸುಂದರ ರಾಮ ಶೆಟ್ರ್ ತನ ದೊಡ್ಡಮ್ಮ ರಾಧಮ್ಮನ ಇಲ್ಲಡಿತ್ತ್‌ದ್ ಸಾಲೆ ಕಲ್ತೆರ್. ಸೈಂಟ್ ಎಲೋಶಿಯಸ್ ಹೈಸ್ಕೂಲುಡು ಮೂಜಿ ವರ್ಸ ಕಲ್ತ್‌ದ್, ಹೈಸ್ಕೂಲು ವಿದ್ಯಾಭ್ಯಾಸೊನು 1930ಡು ಮುಗಿತೆರ್. ಅಲ್ತ್‌ಡ್ದ್ ಆರ್ ಮುಲ್ಕಿಗ್

ಬತ್ತೆರ್. ಬ್ಯಾಡ್‌ಮಿಂಟನ್ ಗೊಬ್ಬುಡು ಅರೆಗ್ ಮಸ್ತ್ ಆಸಕ್ತಿ ಇತ್ತ್‌ಂಡ್. ಹೈಸ್ಕೂಲ್ಡ್ ಉಪ್ಪುನಗನೇ ಆರ್ ಐಟ್ ಪಳಗ್‌ದಿತ್ತೆರ್. ಬ್ಯಾಡ್‌ಮಿಂಟನ್ ಗೊಬ್ಬುನ ಅರೆನ ನಿತ್ಯದ ಹವ್ಯಾಸ ಬೊಕ್ಕ ಅವು ಬಾರಿ ಕುಸಿತ ಗೊಬ್ಬಾದ್‌ತ್ತ್‌ಂಡ್.

ಸಾಲೆಗ್ ಪೋವೊಂದುಪ್ಪುನಗ ಕುಡ್ಲ ಮುಲ್ಕಿ ಪಂಡ್‌ದ್ ಅಂಚಿಂಚಿ ತಿರ್ಗೊಂದಿತ್ತಿನ ಸುಂದರ ರಾಮ ಶೆಟ್ರ್ ರಜೆಟ್ ಅರೆನ ಅಮ್ಮೆರ್‌ನ ಇಲ್ಲಾದಿತ್ತಿನ ಹಿರಿಯಡ್ಕದ ಬೊಮ್ಮರ ಬೊಟ್ಟುಗುಲಾ ಪೋವೊಂದಿತ್ತೆರ್. ಕುಡಲದ ದೊಡ್ಡಮ್ಮನ ಮಗಲ್ ಸುಮತಿ ಮೆರೆನ ಒಟ್ಟುಗೇ ಸಾಲೆಗ್ ಪೋವೊಂದಿತ್ತಿನ ಮೆರೆನ ತಂಗಡಿ. ಕಕ್ವ ಗುತ್ತುದ ಅಜ್ಜಿಗ್ ಸುಂದರ ರಾಮ ಶೆಟ್ರ್‌ಡ ಬಾರಿ ಮೋಕೆ. ಆರ್ ಬತ್ತಿನಾತ್ ದಿನ ಅಜ್ಜಿಗ್ ಇಲ್ಲಡ್ ಪರ್ಬೊದ ಲೆಕ್ಕ.

## ಕೆಲಸೊದ ಪಿರವುಡು

ಹೈಸ್ಕೂಲು ಶಿಕ್ಷಣೊನು ಮುಗಿತಿನ ಸುಂದರ ರಾಮ ಶೆಟ್ರ್ ಆ ಕಾಲೊಡು ತಾನಾದ್ ಬುಲೆವೊಡು ಪನ್ಪಿನ ಮಲ್ಲ ಮಹತ್ವಾಕಾಂಕ್ಷೆನ್ ದೀವೊಂದಿನಾರ್. ಕಾಲೇಜಿದ ಮುಟ್ಟು ಮಿತ್ತರ್ನ ಕೆಲಸ ಆರೆಗ್ ಆತ್ ಕಷ್ಟ ಆತಂದ್. ಆಂಡ ಐಡ್ದ್ ದುಂಬೆ ತನ್ನ ಕಾರ್‌ಡ್ ತಾನೆ ಉಂತುನ ಉಮೇದ್‌ಡ್ ಆರ್ ದುಂಬು ಪೋಯೆರ್. ಪುಟಿನ ಇಲ್ಲ್ ಮಲ್ಲ ರಾಜಮನೆತನದಂಚ ಇತ್ತಿನ. ಐತ ಗುರ್ಕಾರನಾಕುಲು ಊರುಡೇ ಪುದರ್ ಪೋಯಿನ ಗುತ್ತ್‌ದ ಗತ್ತ್‌ದಕುಲು. ಊರುಡೇ ಒರಿದ್‌ಂಡ ಆ ಪಟ್ಟ ಸುಂದರ ರಾಮ ಶೆಟ್ರೆಗೇ ಬೈದುವಾ ದಾನ್ನ! ಆಂಡ ಆರ್ ಐಕ್ ಮನಸ್ಸ್ ಮಲ್ತ್‌ಜೆರ್. ತಾನ್ ಸ್ವತಂತ್ರೊಡೇ ಬದ್ಕೊಡು. ತನ್ನ ಪ್ರಯತ್ನೊಡೇ ಲಕ್‌ದ್ ಸರ್ತ ಉಂತೊಡು ಪನ್ಪಿನಾನೇ ಆರೆನ ಅಂಗಲಾಪು ಆದಿತ್ತ್‌ಂಡ್.

"ಏಷ್ಯಾಟಿಕ್" ಪನ್ಪಿನ ಇನ್ಸೂರೆನ್ಸ್ ಕಂಪನಿಡ್ ಆರ್ ಏಜೆಂಟ್ ಆದ್ 1932 ಟ್ಟ್ ಸೇರೊಂಡೆರ್. ಇನ್ಸೂರೆನ್ಸ್ ವ್ಯವಹಾರೊಗು ಜನ ಸಂಪರ್ಕ ಎಚ್ಚ ಬೊಡು. ಜನೊಕುಲೆ ಮನಸ್ಸ್‌ಗ್ ನಾಟುನ ನಮುನೆಡ್ ಆ ವ್ಯವಹಾರದ ಕೋಡಿ–ಕೊಲ್ಪುಲೆನ್ ಬುಡ್ಪಾದ್ ಪನೊಡು 'ಇನ್ಸೂರ್' ಮಲ್ತ್‌ಂಡ ಜನೊಕುಲೆಗ್ ವಾ ನಮೂನಿದ ಮುನಾಫೆ ಉಂಡ್ ಪನ್ಪಿನೆನ್ ಬುಡ್ಪಾದ್ ಪನೊಡು. ಐಕ್ ಅದಗ ಎಡ್ಡೆ ವ್ಯಾವಹಾರಿಕ ಇಂಗ್ಲೀಷ್ ಜ್ಞಾನ, ಇನ್ಸೂರೆನ್ಸ್‌ದ ಸರಿಯಾಯಿನ ಪರಿಪಕ್ವ ಮಾಹಿತಿ ಜನೊಕುಲೆನ್ ತನ ಕೈತಲ್ ಪಾತೊರೊಡು ಒಯಿತೊನ್ನ ಶಕ್ತಿ, ಕಂಪನಿದ ಪ್ರಾಮಾಣಿಕತೆ ಬೊಕ್ಕ ತನ ಸೇವೆದ ಪ್ರಾಮಾಣಿಕತೆ, ನೆತ್ತ ಮಾತೆತ್ತಾಲ ಅಗತ್ಯ ಇತ್ತ್‌ಂಡ್. ಸುಂದರ ರಾಮ ಶೆಟ್ರೆನ ಇಂಗ್ಲೀಷ್ ಭಾಷಾ ಜ್ಞಾನ ಎಡ್ಡೆ ಇತ್ತ್‌ಂಡ್. ಅವ್ವೇ ಅತ್ತಾಂದೆ ಒವ್ವೇ ಒಂಜಿ ವಿಷಯೊನು ಕೂಡ್ಲೆ

ಗ್ರಹಣ ಮಲ್ಪುನ ಶಕ್ತಿ ಅರೆಡ ಇತ್ತ್ಂಡ್. ಅರೆನ "ನೆನಪು ಶಕ್ತಿ" ಅದ್ಭುತ. ಒಂಜಿ ಮನುಷ್ಯನ್ ಆರ್ ಕೆಮರಾ ಕಣ್ಣ್‌ಡ್ ತೂವೊಂದಿತ್ತೆರ್. ಒರತೂಯ್ಯೆರ್‌ಡ ಬೊಕ್ಕ ಏಪಲಾ ಮದಪರೆ ಇಜ್ಜಿ! 'ಏಷ್ಯಾಟಿಕ್' ಕಂಪನಿಡ್ ಆರ್ ಕೇವಲ ಮೂಜಿ ವರ್ಸೊ ಕೆಲಸ ಮಲ್ತ್‌ದ್ ಇನ್ಶೂರೆನ್ಸ್ ವ್ಯವಹಾರದ ಕೋಡಿ ಕೊಲ್ಪುಲೆನ್ ತೆರಿಯೊಂಡೆರ್. ಆಯಿಡ್ದ್ ಬೊಕ್ಕ ಶುಭಾಷ್‌ಚಂದ್ರ ಬೋಸ್ ಬೊಕ್ಕ ಶರಶ್ಚಂದ್ರ ಬೋಸ್ ಮೊಕುಲು ಸುರುಮಲ್ತಿನ ಇನ್ಶೂರೆನ್ಸ್‌ದ "ವಾರ್ಡನ್" ಕಂಪನಿ ಸೇರಿಯೆರ್. ಎಡ್ಮ ವರ್ಸೊ ಈ ಕಂಪನಿಡ್ ಕೆಲಸ ಮಲ್ತ್‌ದ್ 'ಕುಡ್ಲ'ದ ಕೊಡಿಕಡೆಲಾ ತನ್ನ ಪುದರ್‌ನ್ ರೈಸಾಯೆರ್. ಇನ್ಶೂರೆನ್ಸ್ ವ್ಯವಹಾರಲಾ ಲಾಯಿಕ್ ಮಲ್ತೆರ್.

ಆ 'ವಾರ್ಡನ್' ಕಂಪನಿಡ್ ಮೆನೇಜರ್ ಆದ್ ಬಡ್ತಿ ಆರ್ ಪಡೆಯೆರ್. ಆರೆನ ಮುಟ್ಟದ ಸಮ್ಮಂದಿ ರಂಗನಾಥ ಶೆಟ್ರ್ ಅದಗ ಅರೆನ ಕುಡಲ ಶಾಖೆಡ್ ಕೆಲೊಸೊಗಿತ್ತೆರ್. ಈ ನಡುಟು ಕಕ್ವ ಗುತ್ತುದಕುಲು ಸೇರ್ದ್ ಪೊಸತೊಂಜಿ ಇಲ್ಲ್ ಕಟ್ಟಿಯೆರ್. ಐಕ್ ಪೊಸಲ್ಲ್ (ಹೊಸಮನೆ) ಪಂಡ್‌ದೇ ಪುದರ್ ದೀಯೆರ್. ಈ ಇಲ್ಲನ್ ಕಾಳಪ್ಪ ಶೆಟ್ರ್ ಕಟ್ಟರೆ ಸುರು ಮಲ್ತ್ತೆರ್. ದಾಸಪ್ಪ ಶೆಟ್ರ್ ಅವ್ವೆನ್ ಪೂರ್ತಿ ಮಲ್ತೆರ್. ಆ ಕಾಲೊಡು ಅವು ಬಾರಿ ಪೊರ್ಲುದ ಇಲ್ಲ್. ಮರತ ಜಂತಿಲು ಕಮ್ಮೊಲು, ಕಂಡಿ ಬಾಕಿಲ್‌ಡ್ ನಾನಾ ರೀತಿದ ಕೆತ್ತನೆಡ್ ರೈಸೊಂದಿತ್ತ್. ಕಾಳಪ್ಪ ಶೆಟ್ರ್ ನೆಡ್ದ್ ದುಂಬು (1870) ದೊಡ್ಡ ಮನೆ ಪಂಡ್‌ದೊಂಜಿ ಇಲ್ಲ್ ಮುಲ್ಕಿಡ್ ಕಟ್ಟಾದಿತ್ತೆರ್. ಅವುಲಾ ಬಾರಿ ಆ ಕಾಲದ ಪೊರ್ಲುದ ಇಲ್ಲ್. ಸ್ವಾತಂತ್ರ್ಯ ಸೇನಾನಿ ರಾಮಕೃಷ್ಣ ಪೂಂಜೆರ್ ಪುಟಿನ ಇಲ್ಲ್ ಅವು. ಕಾಳಪ್ಪ ಶೆಟ್ರ್ ಬಪ್ಪನಾಡ್‌ದ ಮುಕ್ತೇಸರೆ ಆದ್ ದೇವಸ್ಥಾನದ ಉದ್ಧಾರೊಗಾತ್ರ ಪುಣೆದಿನಾರ್. ನಲ್ಪ ವರ್ಸೊಡು ದೇವಸ್ಥಾನದ ಮುಕ್ತೇಸರೆ ಆದ್ ದೇವಸ್ಥಾನೊಗಾತ್ರ ಕೈತಲ್‌ದ ಬೊಕ್ಕ ದೂರದ ಊರುಡ್ದ್‌ಲಾ ಕಂಡೊಲೆನ್ ಗೆತ್ತ್‌ಪಾಡ್ದ್ ಐತ ಗೇಣಿ, ಉಂಬಳಿ ತಿಕ್ಕುಲೆಕ್ಕ ಮಲ್ತ್ತೆರ್. ಬ್ಯಾಂಕ್‌ಡ್ ದೇವಸ್ಥಾನದ ಪುದರ್‌ಡ್ ದುಡ್ಡು ದೀದ್ ಐತ ಬಡ್ಡಿಡ್ ಪೂಜೆ ಪುರಸ್ಕಾರೊಲು ನಡಪುಲೆಕ್ಕ ತುಯ್ಯೆರ್. ದಿ| ಎ.ಬಿ.ಶೆಟ್ರ್ ದ.ಕ.ದ ಮಲ್ಲ ಪುದರ್‌ಪೋಯಿನ ವ್ಯಕ್ತಿ. ಆರ್ ಸಾಹುಕಾರ್ ಕಾಳಪ್ಪ ಶೆಟ್ರೆನ ಮಗೆ. ಎ.ಬಿ.ಶೆಟ್ರ್ ಪನ್ನಗ ಮದ್ರಾಸ್ ಸರಕಾರ ಉಪ್ಪುನಗ ಮಂತ್ರಿ ಆದಿತ್ತಿನಾರ್. ವಿಜಯಾ ಬ್ಯಾಂಕ್‌ದ ಸ್ಥಾಪಕ ಅಧ್ಯಕ್ಷೆ.

ಸಾಹುಕಾರ್ ಕಾಳಪ್ಪ ಶೆಟ್ರೆನ ಅರುವತ್ತೆ ದಾಸು ಶೆಟ್ರ್ ತನ್ನ ತಮ್ಮಲೆ ದೇವಸ್ಥಾನದ ರಕೋಳಿಗೆ ತೂನಗ ವಾ ನಮೂನೆದ ಸವಲತ್ತ್‌ಲೆನ್ ದೇವಸ್ಥಾನೊಗು ಮಲ್ದೆರಾ ಅವ್ವೆನ್ ಪೂರಾ ದುಂಬೊತೊಂದು ತಾನ್‌ಲಾ ಐಕ್ ಬೋಡಾಯಿನಾತ್ ಕೂಡಾಯೆರ್. ಜನಕುಲು ಆರೆನ್ ಬಾರೀ ಭಕ್ತಿಡ್ ತೂವೊಂದಿತ್ತೆರ್. ದೇವಸ್ಥಾನೊಗು ಸುಮಾರು ನಾಲ್ನೂದು ಮುಡಿ ಭೂಮಿದ ಉತ್ಪತ್ತಿ ತಿಕ್ಕುಲೆಕ್ಕ ಮಲ್ತಿನಾರ್ – ದಾಸು ಶೆಟ್ರ್. ನಿತ್ಯ ಉಪಯೋಗುಗು ಬೊಡಾಯಿನ ಪಾತ್ರೆ ಪಗಡಿನ್ಲ ಆರ್ ಕಣಪಾಯೆರ್. ಇಂಚಿನ

ಪುಣ್ಯಾತ್ಮೆರ್ ಪುಟಿನ ಇಲ್ಲಡ್ ಅಳಿಯಸಂತಾನದ ಕ್ರಮೊತ ಲೆಕ್ಕ ಅಕಲೆನ ಪುದರ್, ನದರ್‌ಲೆನ್ ದುಂಬು ಕೊಣಪಿನ ದಾತಾರೆ ಆದ್ ಪುಟುದು ಬುಳೆಯಿನಾರ್ ಸುಂದರರಾಮ ಶೆಟ್ರ್. (1984 ಇಸವಿಡ್ದ್ ದುಂಬೇ ಬಪ್ಪನಾಡ್ ಜೀರ್ಣೋದ್ಧಾರ ಸಮಿತಿದ ಉಪಾಧ್ಯಕ್ಷೆ ಆದ್, ಜ್ಞಾನ ಮಂದಿರ ಹಾಲ್ ಕಟ್ಟಾವರೆ ವೈಯುಕ್ತಿಕವಾದ್ ಬೊಕ್ಕ ಇತರ ಉದ್ಯಮಿಲೆನ ಧನ ಸಹಾಯ ತಿಕ್ಕುಲೆಕ್ಕ ಮಲ್ಪಿನಾರ್ ಸುಂದರ ರಾಮ ಶೆಟ್ರ್)

ಸುಂದರ ರಾಮ ಶೆಟ್ರೆನ ತಮ್ಮಲೆ ಶ್ರೀನಿವಾಸ ಆಳ್ವೆರ್ 'ಪೂನಾ'ಡ್ ಪುದರ್ ಪೋಯಿನ ಹೋಟೆಲ್ ಸಾಹುಕಾರೆ. ಆರ್ ಸುಂದರ ರಾಮ ಶೆಟ್ರೆನ್ ಪೂನೊಗು ಬರ್ರೆ ಪಂಡೆರ್. ಸುಂದರ ರಾಮ ಶೆಟ್ರ್ ಅಡೆಗ್ ಪೊದ್ "ಕ್ರೆಸೆಂಟ್" ಪನ್ಪಿನ ಇನ್ಸೂರೆನ್ಸ್ ಕಂಪನಿಡ್ ಕೆಲಸೊಗು ಸೇರ್ಯೆರ್. 1943 ಡ್ದ್ 1951 ಮುಟ್ಟ ಆ ಕಂಪನಿಡ್ ಬೊಂಬಾಯಿಡ್ ಮ್ಯಾನೇಜಿಂಗ್ ಡೈರೆಕ್ಟರ್ ಆದ್ ಎಡ್ಡೆ ಪುದರ್ ಕಮಾಯೆರ್. ಈ ನಡುಟ್ಟು ಒಂತೆ ಸಮಯ ಬೇಲೆ ಬುಡ್ದು ಊರುಗು ಬತ್ತೆರ್. ಊರುಡು ಮುಲ್ಕಿ ಯೂನಿಯನ್ ಕ್ಲಬ್ ಪನ್ಪಿನ ಕ್ಲಬ್‌ಡ್ ಕುಲುದು ಹೆಚ್ಚಿನ ಸಮಯ ಓದುನೆಟ್ಟ್ ಬೊಕ್ಕ ಕಾಂಡೆ, ಬಯ್ಯ ಬ್ಯಾಟ್‌ಮಿಟನ್ ಗೊಬ್ಬುನೆಟ್ಟ್ ಕಳೆವೊಂದಿತ್ತೆರ್. ಮುಲ್ಕಿಡ್ ಶಾಂಭವೀ ತುದೆ ಪರತೊಂದುಂಡು. ಕಡಪುದ ಬಾಕಿಲ್‌ದ ಕೈತಲ್ ಆ ತುದೆನ್ ತೊವೊಂದು ದೊಸ್ತಿನಕಲೆ ಒಟ್ಟುಗು ಕುಲ್ಲುನು – ಶಾಂಭವೀ ಗಾರ್ಡನ್‌ಡ್ ಕುಲ್ಲುನು ಪನ್ನಗ ಅರೆಗ್ ಬಾರಿ ಇಷ್ಟದ ಸಂಗತಿಯಾದಿತ್ತ್‌ಂಡ್.

ಪೊಸ ಕೆಲಸ ನಾಡೊಂದಿತ್ತಿನ ಶೆಟ್ರೆಗ್ ಮದ್ರಾಸ್‌ದ "ಜೈ ಭಾರತ್ ಇನ್ಸೂರೆನ್ಸ್" ಕಂಪನಿಡ್ ಒಂಜಿ ವರ್ಸೊ ಕೆಲಸ ಮಲ್ಪೊಡಾಂಡ್. ಆಂಡ ಅಯಿಟ್ ಅರೆಗ್ ತೃಪ್ತಿ ಇತ್ತಿಜಿ. ಪೊಸ ಅವಕಾಶಲೊನ್ ಆರ್ ನಾಡೊಂದೇ ಇತ್ತೆರ್. ಐಕಾತ್ರ ಮಸ್ತ್ ತಿರ್ಗಾಟ ಮಲ್ತೊಂದಿತ್ತೆರ್. ಅದಗ ಅರೆನ ಅದೃಷ್ಟ ಒಲಿಯೆಲೆಕ್ಕ ಕಲ್ಕತ್ತೊಡು ಹೆಡ್ ಆಫೀಸ್ ಉಪ್ಪುನ "ಬ್ರಿಟನ್ ಏಂಡ್ – ಎಟ್ಲಾಸ್" ಪನ್ಪಿನ ಇನ್ಸೂರೆನ್ಸ್ ಕಂಪನಿಡ್ ಅರೆಗ್ ಕೆಲಸ ತಿಕ್‌ಂಡ್. ಪತ್ತ್ ವರ್ಸೊ (1952–1962) ಈ ಕಂಪನಿಡ್ ಕೆಲಸ ಮಲ್ತಿನ ಸುಂದರ ರಾಮ ಶೆಟ್ರ್ ತನ್ಕ್‌ಲಾ, ಕಂಪನಿಗ್ಲಾ ಎಡ್ಡೆ ಪುದರ್ ಕಣತೆರ್. ಅರೆನ ಪುದರ್, ಕೀರ್ತಿ, ಊರೀಡೀ ಪರ್ಬುದು ಪೋಂಡು.

# ಮದಿಮೆ ಪನ್ಪಿನ ಸಂಸ್ಕಾರ

ಆಣ್ ಪೊಣ್ಣನ ಬದ್‌ಕ್‌ಡ್ 'ಮದಿಮೆ' ಪನ್ಪಿನ ಒಂಜಿ ಮಾಮಲ್ಲ ಸಂಸ್ಕಾರ ಪಂಡ್‌ದ್ ಹಿಂದೂ ಧರ್ಮ ಐಕ್ ಮಸ್ತ್ ಮಹತ್ವೊನು ಕೊರ್ತುಂಡು. ಗ್ರಹಸ್ಥ ಜೀವನೊಗು ಬಾರೀ ಗೌರವ ಉಂಡು. ಒಂಜಿ ಮದಿಮೆ ಆವೊಡ್ಡ ಐಕ್‌ಲಾ ಒಂಜಿ ಪೂರ್ವ ಯೋಜನೆ ಉಂಡು ಪಂಡ್‌ದೇ "ಋಣಾನುಬಂಧ ರೂಪೇಣ ಪಶುಪತ್ನಿ ಸುತಾಲಯ" ಪನ್ಪಿನ ಪಾತೆರ ಉಂಡು. ಇಂಗ್ಲೀಷ್ ಭಾಷೆಡ್ ಅವ್ವೇ "ಮ್ಯಾರೆಜಸ್ ಆರ್ ಮೇಡ್ ಇನ್ ಹೆವನ್" ಪನ್ಪೆರ್. ಮದಿಮೆ ಆನಗ ಆಣ್, ಪೊಣ್ಣು ಅನುರೂಪೆರಾದ್ ಒರಿಯಗೊರಿ ಪೂರಕೆರಾವೊಡುಂದು ಹಿರಿಯಾಕ್ಲೆನ ಪಾತೆರ. ಶಾಸ್ತ್ರ ಎಂಚ ಪಂಡಲಾ ಒಂಜಿ ಪೊಣ್ಣಗ್ ಯೋಗ್ಯ ಆಣನ್ ನಾಡುನ, ಒಂಜಿ ಯೋಗ್ಯ ಆಣಗ್ ಪೊಣ್ಣನ್ ನಾಡುನ ಕೆಲಸ ಮಾತ್ರ ಅಕುಲಾದ್ ಅತ್ತ್‌ಂಡ, ಅಕಲ್ನ ಜವಾಬ್ದಾರಿ ಗೆತೊನೊಂದುಪ್ಪುನ ಅಪ್ಪೆ ಅಮ್ಮೆ, ತಮ್ಮಲೆ-ಹಿರಿಯಕ್ಲು ಮಲ್ಪೊಡೆ!

ದುಂಬು ನಮ್ಮ ಅಜ್ಜೆರ್ ಪಿಜ್ಜೆರ್ ಅಕಲ್ನ ಪಿರಿಯಾಕ್ಲೆನ ಕಾಲೊಡು 'ತೊಟ್ಟಿಲ್' ಮದ್ಮೆ ಅವೊಂದುತ್ತುಂಡುಗೆ. ಅದಗ ಹೆಚ್ಚಿನ ಮದಿಮೆಲು ಸಮ್ಮಂದ, ದೋಸ್ತಿಖಾತೆದ ಉಲಯಿ ನಡತೊಂದುಲಾ ಇತ್ತ್‌ಂಡ್. ಮುಲ್ಕಿ ಸುಂದರ ರಾಮ ಶೆಟ್ರೆನ ಕಾಲೊಡು ತೊಟ್ಟಿಲ್ ಮದಿಮೆದ ಸಂದರಪ್ಪುಲು ಕಡಿಮೆ ಆದ್‌ತ್ತ್‌ಂಡಲಾ ಆರೆನ ಹಿರಿಯೆರ್‌ನಕ್ಲು ಆರೆಗ್ ತೊಟ್ಟಿಲ್ ಮದಿಮೆ ಮಲ್ಪುನ ವಿಚಾರಲಾ ಒರ ಮಲ್ತ್‌ಂತ್ತಿರೆಗೆ. ಆಂಡ ಅವು ದಾಯೆಗಾ ತತ್ತ್ ಪೋಂಡು. ಆಧುನಿಕ ಜೀವನ ಶೈಲಿದ ಗಾಳಿ ಬೀಜ್‌ದ್ ನಮ್ಮ ಏತೋ ಕಟ್ಟುಲು-ಆಚರಣೆಲು ಸಡಿಲಾತ ವೈಚಾರಿಕ ದೃಷ್ಟಿಡ್ ಬದ್‌ಕ್‌ನ್ ತೂದು ಅಲ್ಬೇಸುನ ದಿಟ್ಟಿ ನಂಕ್ ಬೈದ್‌ಂಡ್. ಆಂಚಂದ್ ನಮ್ಮ ಹಿರಿಯೆರ್ ಮಲ್ತೊಂದಿತ್ತಿನ ಏತೋ ರಿವಾಜ್-ಕಟ್ಟ್ ನಿಟ್ಟ್‌ಲೆಗ್ ಸರಿಯಾತಿನ ಅರ್ತ ಇತ್ತಿನ ನಂಕ್ ತೆರಿದಿಜಿ. ದುಂಬುದ ಕಾಲೊಡು ಮದಿಮೆ ಆನಗ ರಡ್ಡ್ ಇಸಯೊನು ಸರೀ ತೂವ್ವೆರ್. ಒಂಜಿ ಆಣ್ ಪೊಣ್ಣನ ಇಲ್ಲ್ ಬದ್‌ಕ್, ಆಸ್ತಿ, ನನೊಂಜಿ ಅಕಲ್ನ ಮನೆತನೊ.

ಸುಂದರ ರಾಮ ಶೆಟ್ರೆನ ಮದಿಮೆ ಇಲ್ಲಡೇ ಪನ್ನಗ ಅರೆನ ಅಮ್ಮೆರೆನ ಮರ್ಮಲ್‌ನೊಟ್ಟುಗೇ ನಡತ್‌ಂಡ್. ಸುಂದರ ರಾಮ ಶೆಟ್ರೆ ಅರೆನ ಅಮ್ಮೆರೆಲ್ಲಾಡ್ ವಂತೆ ಸಮಯ ಸಾಲೆಗ್ ಪೋವೊಂದುಪ್ಪುನಗ ಅರೆನ ಬಡೆದಿ ಆಪಿನ ಪೊಣ್ಣು

ಮಗಲ್ 'ಕುಸುಮಾವತಿ' ಲಾ ಅರೆನ ಒಟ್ಟುಗು ಸಾಲೆಗ್ ಪೋತಿನಾರ್. ಅಂಚಾದ್ ಪರಸ್ಪರ ಪರಿಚಯ, ಪ್ರೀತಿ, ಸಲುಗೆ ಮಾತ ಸುರುವೇ ಇತ್ತ್ಂಡ್. 'ಕುಸುಮ' ಪನ್ನಗ ಅರೆನ ಕುಟುಂಬದ ಮಾತೆರೆಗ್ಲಾ ಬಾರೀ ಪಿರ್ತಿದ, ಅರ್ತಿದ ಪೊಣ್ಣು ಮಗಲ್. ಪುದರ್‌ಗ್ ತಕ್ಕಂತಿನ ಅರೆನ ನಡವಳಿಕೆ, ಸುಂದರ ರಾಮ ಶೆಟ್ರೆನ ದುಂಬುದ ಬದ್‌ಕ್‌ಗ್ ಪೂರ್ತಿ ಸ್ಫೂರ್ತಿ ದಿಂಜಿನ ಕೀರ್ತಿ ಕುಸುಮಾವತಿ ಶೆಟ್ರೆಗ್ ಸೇರ್‍ದ್ಂಡ್.

ಸುಂದರ ರಾಮ ಶೆಟ್ರೆನ ಇರ್ವತ್ತರಡ್ಡನೆ ವರ್ಸೊ ಪ್ರಾಯೊಡು ಪನ್ನಗ 1937 ನೇ ಇಸವಿಡ್ ಈ ಮದ್ಮೆ ನಡತ್‌ಂಡ್. ಕುಸುಮಾವತಿ ಬೊಕ್ಕ ಆರ್ ಒಂಜೇ ಇಲ್ಲಾಡ್ ಒಟ್ಟುಗೇ ಮಲ್ಲಾಯಿನಕುಲು. ಎಲ್ಲಿಡೇ ಅಕಲೆಡ ಒಂಜಿ ಆಕರ್ಸನೆ, ಪ್ರೀತಿದ ಬಂಧ ಇತ್ತ್ಂಡ್. ಒರಿಯಗಾತ್ರ ಬೊಕ್ಕೊರಿ ಪುಟಿಲೆಕ್ಕ ಅಕಲೆನ ಒಡನಾಟ ಇತ್ತ್ಂಡ್. ಅಂಚಾದೆ ಇಲ್ಲಾಡ್ ಮೊಕಲೆಗ್ ತೊಟ್ಟಿಲ ಮದಿಮೆದ ಪ್ರಸ್ತಾಪಲಾ ಇತ್ತ್ಂಡ್‌ಗೆ. ಅವು ಒರಿದ್ ಪೋಂಡಲಾ ಅಕಲು ಬೊಕ್ಕ ಒಂಜಾಯೆರ್. ಮನಸಾರೆ ಒರಿಯನೊರಿ ಒಪ್ಪೊಂಡೆರ್.

ತನ್ನ ಸೊಂತ ಕಾರ್‌ಡ್ ಸರ್ತ ಉಂತುದು ಬದ್ಕ್‌ಡ್ ಮಾಮಲ್ಲ ಸಾಧನೆ ಮಲ್ಪೊಡು ಪನ್ಪಿನ ಛಲವಾದಿ ಸುಂದರ ರಾಮ ಶೆಟ್ರ್. ಮದಿಮೆ ಆಯಿನೆಡ್ದ್ ಬೊಕ್ಕ ಆರೆನ ಮಾತ ಕನಕೊಲು ಸಾಜ ಆವೊಂದು ಬತ್ತ. ಆರ್ ಮಲ್ತೊಂದಿತ್ತಿನ ಇನ್ಸೂರೆನ್ಸ್ ಬಿಸಿನೆಸ್ ಅರೆನ ಕೈಪತಂಡ್, ದಿನೊಡ್ದು ದಿನ ಐಟ್ ಅಭಿವೃದ್ಧಿ ಆಂಡ್. ಎಡ್ಡೆ ಎಡ್ಡೆ ಕಂಪೆನಿಡ್ ಮಲ್ಲ ಮಲ್ಲ ಪೋಸ್ಟ್ ಡಿತ್ತ್‌ದ್ ಮಸ್ತ್ ಪುದರ್, ಕೈ ನಿಲ್ಕೆ ದುಡ್ಡು ಸುಂದರ ರಾಮ ಶೆಟ್ರೆಗೆ ತಿಕ್‌ಂಡ್. ಮದಿಮೆ ಆಯಿ ಸುರುಟು ಆರ್ ಬೊಡೆದಿನ್ ಮುಲ್ಕಿಡೇ ಬುಡ್ದ್, ಕುಡ್ಲಡಿತ್ತೆರ್. ರಜೆತಾನಿ ಮುಲ್ಕಿಗ್ ಬರೊಂದಿತ್ತೆರ್.

ಕುಸುಮಾವತಿ ಇಲ್ಲಡ್ ಮಾತೆರೆಗ್ಲಾ ಹೊಂದೊಂದು ಪ್ರೀತಿಡಿತ್ತೆರ್. ಆರ್ ಅಪ್ಪೆಗ್ ಎಂಚ ಪಿರ್ತಿದ ಮಗಲಾದಿತ್ತೆರಾ ಅಂಚೆನೆ ಮಾಮಿಗ್ಲಾ ಮಗಲೇ ಆಯೆರ್. ಮಾಮಿನ್ ಅಪ್ಪೆಲೆಕ್ಕನೇ ತೂವೊಂದಿತ್ತೆರ್. ಪುಟಿನ ಬೊಕ್ಕ ಪೋಯಿನ ಈ ರಡ್ದ್ ಇಲ್ಲಾಗ್ಲಾ ಬೊಲ್ಪಾದ್ ಕೀರ್ತಿ ಕಣತೆರ್. ತನ್ನ ಕಂಡನೆ ರಜೆಟ್ ಇಲ್ಲಡೆ ಬನ್ನಗ ಅರೆನ "ಬೋಡು ಬೊಡ್ಚಿನ್ ಅರ್ಥ ಮಲ್ತೊಂದು ಪೊರ್ಲುಡು ನಡತೊಂದಿತ್ತೆರ್. ಕುಸುಮಾವತಿ ಅಕ್ಕ ಏರೆಗ್ಲಾ ಜೋರುಡು ಪಾತೆರ್‍ದಿನ, ಇಜಿಂಡ ಏರೆನಲಾ ಮನಸ್ಸ್‌ಗ್ ಬೇಜಾರ್ ಆಪಿ ಲೆಕ್ಕ ಪಾತೆರ್ದಿನ ಸಂದರ್ಭನೇ ಇಜ್ಜಿ ಪಂಡ್‌ದ್ ಅರೆನ್ ಕೈತಲ್ಡ್ ತೂದು ತೆರಿದಿನಕಲೆನ ಹೇಳಿಕೆ. ಅರೆನ ಮಾಮಿಗ್ ಸುಂದರ ರಾಮ ಶೆಟ್ರ್ ಒರಿಯೇ ಆಣ್ ಮಗೆ. ಪೊಣ್ಣು ಸಂತಾನ ಇಜ್ಜಿ, ಆ ಪೊಣ್ಣು ಮಗಲ್ ದಾಂತಿನ ಜಾಗ್‌ನ್ ಮೇರ್ ಮಾಮಿಗ್ ದಿಂಜಾದ್ ಕೊರ್ತೆರ್ ಪನ್ನಗ ಅಕುಲು ಮಾಮಿ-ಮರ್ಮಲ್ ಎಂಚ ಇತ್ತೆರ್ ಪಂದ್ ನಮ ತೆರಿಯೊಣೊಡು.

ಇಲ್ಲಡ್ ಬತ್ತಿನ ಅತಿಥಿಲೆನ್, ಸಮ್ಮಂದದಕಲೆನ್, ಹಿರಿಯೆರೆನ್ ಆರ್ ಆದರಿತ್ ಕಡಪುಡೊಂದಿತ್ತೆರ್‌ಗೆ. ಕಕ್ವ ಗುತ್ತುಡು ಉಪ್ಪುನಗ ಆ ಇಲ್ಲಾಗೇ ಒಂಜಿ 'ಶೋಭೆ' ಆದ್

ಇತ್ತೆರ್. ಸಮಯಾಸಮಯ ದಾಂತೆ ಬತ್ತಿನ ಬಿನ್ನೆರೆನ್ಲಾ ಆರ್ ಕೋಪೊಡು ತೂತಿನಂದೆ ಇಜ್ಜಿ. ಮಾತೆರೆಗ್ಲಾ ಬಾಯಿ – ಕೈಟ್ ಒಂಜೇ ರೀತಿಡ್ ಸತ್ಕಾರ. ಮನುಷ್ಯ ಸಂಬೊಂದೊನು ಅರ್ತ ಮಲ್ತೊಂದು, ಐಕ್ ಮಹತ್ವೊನು ಕೊರ್ದು ತನ ಕಂಡನಗ್ ತಕ್ಕ ಬುಡೆದಿಯಾದ್ ಅರೆನ ಉನ್ನತಿಗ್ ಮೇರ್‌ಲಾ ಕಾರಣ ಆಯೆರ್ ಪಂಡ ಸುಳ್ಳಾವಂದ್.

ಸುಂದರ ರಾಮ ಶೆಟ್ರ್ ಕೆಲಸಗಾತ್ರ ಬೊಂಬಾಯಿ, ಪುಣೆ, ಕಲ್ಕತ್ತಾದಂಚಿನ ಜಾಗೆಗ್ ಪೋನಗ ಆರೆನೊಟ್ಟುಗು ಕುಸುಮಾವತಿಲಾ ಪೋಯೆರ್. ಮಸ್ತ್ ತಿರ್ಗಾಟ ಮಲ್ತ್‌ದ್ ಅನುಭವ ಪಡೆಯೆರ್. ಸುಂದರ ರಾಮ ಶೆಟ್ರ್ ಬೆಂಗಳೂರುಡು ವಿಜಯಾ ಬ್ಯಾಂಕ್‌ದ ಚೇರ್‌ಮ್ಯಾನ್ ಆದುಪ್ಪುನಗ, ಅರೆನ ಇಲ್ಲಡೆಗ್ ಬರ್ಪಿನ ಜನಲಾ ಬಾರಿ ಇತ್ತ್‌ಂಡ್. ಎಚ್ಚಿನಕುಲು ಸಾಯ, ಕೆಲಸ ಕೇಣೊಂದು ಊರುಡ್ದು ಅಯಿಡ್ದ್‌ಲಾ ಮುಲ್ಕಿಡ್ದ್ ಪೋಪಿನಕುಲು ಅಕಲೆಗ್ ಮಾತ ಒಂಜತ್ತ್‌ಡ ಕುಡೊಂಜಿ ರೀತಿಡ್ ಸಹಾಯ ಸತ್ಕಾರ ಮಲ್ತಿನ ಕೀರ್ತಿ ಕುಸುಮಾವತಿ ಅಕ್ಕೆಗ್.

ಮುಲ್ಕಿದ ಪೊಸ ಇಲ್ಲ್‌ಡ್ (ದಾಸು ಶೆಟ್ರ್ ಕಟ್ಟಾದಿತ್ತಿನ ) ಉಪ್ಪುನಗ ಸುಂದರ ರಾಮ ಶೆಟ್ರೆನ ಸುರುತ ಮಗಲ್ 'ಉಷಾ' ಪುಟುದಿತ್ತೆರ್. ಆರ್ ಮುಲ್ಕಿದ ಕಾನ್ವೆಂಟ್ ಶಾಲೆಗ್ ಪೋವೊಂದಿತ್ತೆರೆಗೆ. ರಡ್ಡನೆ ಮಗೆ ರಾಧಕೃಷ್ಣ ಶೆಟ್ರ್ ಬೆಂಗಳೂರುಡು ಶಾಲೆಗ್ ಪೋತಿನಾರ್. ಮೂಜನೆ ಮಗಲ್ ವೃಂದಾ, ನಾಲನೇ ಮಗೆ ಉದಯ ಕುಮಾರ್ ಶೆಟ್ಟಿ ಮುಲ್ಕಿ ಬೋರ್ಡು ಹೈಸ್ಕೂಲುಡು ಕಲ್ದೆರ್. ಅದಗ ಎಲ್ಲಿತ್ತಿನ ಕುಡೊಂಜಿ ಮಗಳ್ ಉರ್ಮಿಳಾ ಬೊಕ್ಕ ಎಲ್ಯ ಮಗೆ ಅಶೋಕ್ ಕುಮಾರ್ ಶೆಟ್ರ್ ಬೆಂಗಳೂರುಡು ಶಾಲೆ ಕಾಲೇಜ್ ಕಲ್ದಿನಕ್ಲು. ಒಟ್ಟು ಏಳ್ ಜೋಕ್ಲೆಡ್ ರಡ್ಡ್ ಜನ ಸುರುಟು ಪರದೇಸೊಡು ಎಡ್ಡೆ ಹುದ್ದೆಡಿತ್ತೆರ್. ಮಗಳ್ ಉರ್ಮಿಳಾ ಮುಲ್ಕಿದ ಡಾ. ಕೆ. ತಾರಾನಾಥ ಶೆಟ್ರೆನ್ ಮದ್ಮೆ ಆದ್ ಅಮೆರಿಕಡ್ ಇತ್ತೆರ್.

ಕುಡ್ಲದ ರವೀಂದ್ರನಾಥ ಪೂಂಜ ಗಣ್ಯ ವ್ಯಕ್ತಿ. ಸುಂದರ ರಾಮ ಶೆಟ್ರೆನ ಮಲ್ಲ ಮಗಲ್ ಉಷಾ ಅರೆನ ಬುಡೆದಿ. ರವೀಂದ್ರ ನಾಥ ಪೂಂಜೆರ್ಲಾ ವಿಜಯಾ ಬ್ಯಾಂಕ್‌ದ ಡೈರೆಕ್ಟರ್ ಆದಿತ್ತೆರ್. ಇಸ್ಟೇಟ್‌ಲಾ ಇತ್ತ್‌ಂಡ್. ವಂತೆ ವರ್ಸೊದುಂಬು ಆರ್ ತೀರ್ ಪೋಯೆರ್. ಸುಂದರ ರಾಮ ಶೆಟ್ರೆನ ಮಲ್ಲ ಮಗೆ ರಾಧಕೃಷ್ಣ ಪನ್ಪಿನಾರ್ ಡಾಕ್ಟರಾದ್ ಮಸ್ತ್ ವರ್ಸೊ ಅಮೆರಿಕಾಡಿತ್ತ್‌ದ್ ಇತ್ತೆ ಬೆಂಗಳೂರುಗು ಬತ್ತ್‌ದ್ ಪ್ರಾಯೊದ ತನ ಅಮ್ಮನೊಟ್ಟುಗು ಉಲ್ಲೆರ್. ಕುಡೊರಿ ಮಗೆ ಹರಿಪ್ರಸಾದ್ ಇಂಜಿನಿಯರಿಂಗ್ ಮಲ್ತ್‌ದ್ ಬೆಂಗಳೂರುಡು ಉದ್ಯಮಿಯಾದುಲ್ಲೆರ್. ಒರ್ತಿ ಮಗಲ್ ವೃಂದಾ ರವೀಂದ್ರನಾಥ ಪೂಂಜೆರ್ನ ಮೆಗ್ಯೆ ಡಾ. ಪ್ರೇಮ ಪೂಂಜೆರ್‌ನ ಬುಡೆದಿ. ಅರೆಗ್ ಕೊಡಗುಡು ಇಸ್ಟೇಟ್‌ಲಾ ಉಂಡು. ಎಲ್ಯ ಮಗೆ ಅಶೋಕ್ ಕುಮಾರ್ ಶೆಟ್ರ್ ವಿಜಯಾ ಬ್ಯಾಂಕ್‌ದ ಡೈರೆಕ್ಟರ್ ಆದತ್ತೆರ್. ಬೊಕ್ಕ ವಿಜಯಾ ಲೀಸಿಂಗ್ ಕಂ. ಸುರುಮಲ್ತೆರ್. ಇತ್ತೆ ಬೆಂಗಳೂರುಡೇ ಉಲ್ಲೆರ್.

ಇಂಚ ಸುಂದರ ರಾಮ ಶೆಟ್ರೆನ ಸಂಸಾರ ಎಡ್ಡೆ ರೀತಿಡ್ ಸಾಗ್‌ದ್‌ಂಡ್. ಜೋಕುಲು ಮಾತ ಸಮಾಜೊಡು ಎಡ್ಡೆ ಪುದರ್ ಸ್ಥಾನ ಮಾನ ಗೆತೊಂದುಲ್ಲೆರ್. ಕುಸುಮಾವತಿ ಅಕ್ಕೆ ಅರೆನ ಕೈಪತಿ ಬೊಕ್ಕ ಅರೆನ ಭಾಗ್ಯದ ಬಾಕಿಲ್ ಜತ್ತೊಂಡು. ಪ್ರತಿಯೊಂಜಿ ಅಂಜೇವೆನ ಗೆಲ್ಮೆದ, ಮೇಲ್ಮೆದ ಪಿರವು ಒಂಜಿ ಪೊಂಜೆವೆನ ತ್ಯಾಗ ಉಂಡುಗೆ, ಮೂಲುಲಾ ಅವು ಇತ್ತಿನೆನ್ ನಮ ತೆರಿಯೊಡು. ಕುಸುಮಾವತಿ ಅಕ್ಕೆ ತನ ಕಂಡನನ ಪಿರವುದ ಒಂಜಿ ಶಕ್ತಿ ಆದ್, ತನ ಜೊಕುಲೆಗ್ ಮೋಕೆದ ಅಪ್ಪೆ ಆದ್ ಮಾತೆರೆನ್ನಾ ಪೊರ್ಲುಡು ತೊವೊಂಡೆರ್. ಇತ್ತೆಲಾ ಆರ್ ಪ್ರಾಯ ಕರಿಂಡಲಾ ಮನಸ್ಸ್‌ದ ಉತ್ಸಾಹ ಕಡಿಮೆ ಅವಂದಿಲೆಕ್ಕ ಉಲ್ಲೆರ್. ಬೆಂಗಳೂರುಡು ಶೇಷ ಜೀವನ ನಡಪಾವೊಂದುಲ್ಲೆರ್.

# ಕೃಷಿಕೆರೆನ ಬ್ಯಾಂಕ್

ಭಾರತೊಡು ಸುಮಾರ್ ಆಜರೆ ಲಕ್ಷ ಹಳ್ಳಿಲು ಉಲ್ಲ. ಜನೊಕುಲೆನ ಮಲ್ಲ ಕಸುಬು ಪನ್ನಗ ಕೃಷಿ. "ಕೃಷಿತೋ ನಾಸ್ತಿ ದುರ್ಭಿಕ್ಷಂ" ಪಂಡ್‌ದ್ ಪಾತೆರೊನೇ ಉಂಡು. ಕೃಷಿ ಇತ್ತಿನ್ಯೆಟೆ ದುರ್ಭಿಕ್ಷ ಇಜ್ಜಿಗೆ. ಆಂಡ ಕೃಷಿ ಮಲ್ಪುನಾಯಗ್ ಉದಾಸೀನ ಉಪ್ಪರೆ ಬಲ್ಲಿ. ಇನಿ ಮಲ್ಪುನ ಕೆಲಸೊನು ಎಲ್ಲೆಗ್ಂದ್ ದೀವರೆ ಬಲ್ಲಿ. ಅಂಚಾಂಡ "ಉಪೇಕ್ಷೆಯಿಂ ಕೃಷಿ ಕೆಡುಗು" ಇನ್ಪಿನ ಪಾತೆರೆದ ಲೆಕ್ಕಾವು. ಇಂಚಿನ ಕೃಷಿಕೆರೆ ಜೀವನಾದಾರನೇ ನೀರ್. ನೀರ್ ದಾಂತೆ ಏರೆಗ್ಲಾ ಬದ್‌ಕೆರೆ ಸಾಧ್ಯ ಇಜ್ಜಿ. ಕೃಷಿ ಅಂತೂ ಸಾಧ್ಯನೇ ಇಜ್ಜಿ. ನಮ್ಮ ದೇಶೊಡು ಬರ್ಪಿನ ಬರ್ಸದ ಮಿತ್ತ್ ಕೃಷಿತ ಎಡ್ಡೆತನ ಅವಲಂಬನ. ಅತಿವೃಷ್ಟಿ, ಅನಾವೃಷ್ಟಿಡ್ ಬುಳೆಸಲೆತ ಲೆಕ್ಕಾಚಾರ ತಪ್ಪುನ ಉಂಡು. ರೈತೆ ದೇಸೊಗು ನುಪ್ಪು ಕೊರ್ಪಿನಾಯೆ ಆಂದ್. ಆಂಡ ದುರಂತ ಪಂಡ ಆಯೆನೇ ಏತೋ ಸರ್ತಿ ಬಂಜಿ ಗಿಜ್ಜಾಂದೆ ಸೈಪಿನ, ಇತ್ತಿತ್ತೆ ಮಲ್ತಿನ ಸಾಲ ಸಂದಾವರೆ ದಾಂತೆ ರೈತೆರ್ ಜುವ ಗೆತ್ತೊನ್ನಾಲಾ ಎಚ್ಚಾವೊಂದುಂಡು. ರೈತೆರೆನ ಏಳಿಗೆ ದೇಸದ ಏಳಿಗೆ ಪನ್ಪಿನೆನ್ ಬಾಯಿಡ್ ಮಾತೆರ್ಲಾ ಪನ್ಪೆರ್. ಐಕಾತ್ರ ಕಷ್ಟ ಬುಡುಪಿನಕ್ಲು ಪುಣೆಪಿನಕುಲು ಕಡಿಮೆ.

ಊರುದ ರೈತೆರೆ ಕೆಲಸೊಗು ಸಾಕಾಯ ಅವೊಡು, ಅಕಲೆ ಅನಪತ್ಯ, ಅಗತ್ಯ, ಅರಿಷ್ಟೊಲೆಗ್ ತಾಂಗ್ ಆವೊಡು ಪನ್ಪಿನ ಉದ್ದೇಶೊಡು ಪುಟಿನ 'ಬ್ಯಾಂಕ್' ವಿಜಯಾ ಬ್ಯಾಂಕ್. ಕೃಷಿಕೆರೇ ಸೇರ್ದ್ ಕೃಷಿಕೆರೆಗಾತ್ರನೇ ಸುರುಮಲ್ತಿನ ಬ್ಯಾಂಕ್ ಉಂದು. 1931 ನೇ ಇಸವಿಡ್ ಅಕ್ಟೋಬರ್ ಇರ್ವತ್ತ ಮೂಜನೆ ತಾರೀಕ್‌ದಾನಿ (ವಿಜಯ ದಶಮಿದ ದಿನ ) ಕುಡ್ಲಡ್ ಈ ಬ್ಯಾಂಕ್ ತನ್ನ ವ್ಯವಹಾರೊನು ಸುರು ಮಲ್ತ್ಂಡ್. ವಿಜಯಾ ಬ್ಯಾಂಕ್ ಇನಿ ವಿಶ್ವ ಮಟ್ಟೊಗು ಮುಟ್ಟೊಡ್ಡ ಅವು ಬತ್ತಿನ ಬಜ ಅಲ್‌ಂಬೇಯಿನ ಕಷ್ಟ ಸಾಮಾನ್ಯದ ಅತ್ತ್. ಏತೊ ಸರ್ತಿ ಮಿತ್ತ್ ಏರೊಂದು ಬೊಕ್ಕ ಕೆಲವು ಸರ್ತಿ ತಿರ್ತ್ ಬೂರೊಂದು ಇಂಚಾಂಡಲಾ ತಳೊನು ಗಟ್ಟಿ ಊರೊಂದು, ತನ್ನ ಕೀರ್ತಿನ್ ಪರ್ಬಾವೊಂದು ಅವು ಬುಲೆಯಿನ ಪೊರ್ಲೆ ಪೊರ್ಲುರ್.

ಅತ್ತಾವರ ಬಾಲಕೃಷ್ಣ ಶೆಟ್ರ್ ಪನ್ನಗ ಕುಡ್ಲದ ಮಾಮಲ್ಲ ಪುದರ್. ಆರ್ ಮುಲ್ಕಿ ಸಾಹುಕಾರ ಕಾಳಪ್ಪ ಶೆಟ್ರೆನ ಮಗೆ ಆದ್ 1877ಟ್ಟ್ (ಶ್ರೀ ಸಾಹುಕಾರ ಕಾಳಪ್ಪ ಶೆಟ್ರ್

ಸುಂದರ ರಾಮ ಶೆಟ್ರೆನ ಪಿಜ್ಜೆ) ಪುಟಿಯೆರ್. ಇಂಟರ್ ಮೀಡಿಯೆಟ್ ಮುಟ್ಟ ಕಲ್ದಿನ ಎ. ಬಿ. ಶೆಟ್ರ್ ತನ್ನ ಆರೋಗ್ಯದ ಸಮಸ್ಯೆಡ್ದಾತ್ರ ಬರವುನು ಅರ್ದೊಡೇ ಉಂತಾಯೆರ್. ಆಂಡ ಗ್ರಂತೊಲೆನ್ ಓದುನ ಪರಿಪಾಠ, ವಿಜ್ಞಾನದ ಮಿತ್ತ್ ಆಸಕ್ತಿ, ಮೂಡನಂಬಿಕೆಲೆನ ಎದ್ರ್ ಲಡಾಯಿ, ಸಮಾಜದ ಅಭಿವೃದ್ಧಿಗಾದ್ ಪುಣೆವುನ ಕಸು ಉಂದು ಮಾತ ಅರೆಡ ಇತ್ತ್‌ಂಡ್. ಅರೆನ ಇಲ್ಲಡ್ ಒಂಜಿ ಗ್ರಂಥಾಲಯನೇ ಇತ್ತ್‌ಂಡ್‌ಗೆ. ತನ್ನ ನಿರಂತರ ಸಾರ್ವಜನಿಕ ಕೆಲಸೊಡು ಪುರುಸೊತ್ತು ತಿಕ್ಕಿ ಕೂಡ್ಲೆ ಪುಸ್ತಕ ಬಡ್ಪಾವುನ ಪರಿಪಾಠ ಆರೆನ ಆದ್‌ತ್ತ್‌ಂಡ್. ಕುಡ್ಲಡ್ ರಾಮಕೃಷ್ಣ ವಿದ್ಯಾಭವನ ಕಟ್ಟಾಯಿನೆಟ್ಟ್ ಬಾಲಕೃಷ್ಣ ಶೆಟ್ರ್ ಬೊಕ್ಕ ಅರೆನ ಪಲಯೆ ಸೀತಾರಾಮ ಶೆಟ್ರ್ ಪ್ರಮುಖೆರ್. ಬಾಲಕೃಷ್ಣ ಶೆಟ್ರ್ 'ನವಯುಗ' ಪನ್ಪಿನ ವಾರ ಪತ್ರಿಕೆನ್ನ ನಡಾಪಾದೆರ್. ಉಂದೇ ಪತ್ರಿಕೆಡ್ ಖ್ಯಾತ ವಿದ್ವಾಂಸೆರಾಯಿನ ಕಡಂಗೋಡ್ಲು ಶಂಕರ ಭಟ್ರ್ ಸಹ ಸಂಪಾದಕೆರಾದ್. ಖ್ಯಾತ ಸಾಮಾಜಿಕ ಕಾರ್ಯಕರ್ತೆ ಆಯಿನ ಕೆ.ಕೆ. ಶೆಟ್ರ್ ಉಪ ಸಂಪಾದಕೆರಾದ್ಲಾ ಇತ್ತೆರ್. ಇಂಚಿನ ಎ.ಬಿ. ಶೆಟ್ರ್ ಮದ್ರಾಸ್ ಪ್ರಾಂತ್ಯೊದ ಮಂತ್ರಿ ಮಂಡಲೊಡು ಮಂತ್ರಿ ಆದ್ ಮೈಸೂರು ರಾಜ್ಯ ಆನಗ ಐಟ್ಲಾ ಮಂತ್ರಿ ಆದ್ ಜನಸೇವೆ ಮಲ್ದಿನಾರ್. ಆರೆನ ದೂರದರ್ಶಿತ್ವ, ಮುನ್ನೋಟದ ಸಾಕ್ಷಿಯಾದೆ ವಿಜಯಾ ಬ್ಯಾಂಕ್ ಜನನೊಗು ಬತ್ತ್‌ಂಡ್. ಅವ್ವೆನ್ ಸುರು ಮಲ್ತಿನಿ ರಡ್ಡನೆ ತಾರಿಕ್ ಫೆಬ್ರವರಿ 1931 ಟ್ಟ್. (ವ್ಯವಹಾರ ಸುರುಮಲ್ತಿನಿ 23.10.1931 ಟ್ಟ್). 1931ಡ್ದ್ 1937 ಮುಟ್ಟ ಬ್ಯಾಂಕ್‌ದ ಅಧ್ಯಕ್ಷೆರಾದ್ ಎ.ಬಿ.ಶೆಟ್ರ್ ಇತ್ತೆರ್. 1937ಟ್ಟ್ ಆರ್ ಮದ್ರಾಸ್ ಎಸ್ಸೆಂಬ್ಲಿಗ್ ಆಯ್ಕೆ ಆದ್ ಅವುಲು ಪಾರ್ಲಿಮೆಂಟರಿ ಕಾರ್ಯದರ್ಶಿಯಾದ್ ಕೆಲಸ ಮಲ್ಪೊಡಾಂಡ್. ಅಂಚಾದ್ ಬ್ಯಾಂಕ್‌ದ ಅಧ್ಯಕ್ಷ ಸ್ಥಾನೊನು ಬುಡಿಯೆರ್. (ಕುಡ್ಲದ ವಿಜಯಾ ಬ್ಯಾಂಕ್‌ದ ಪೊಸ ಕಟ್ಟೊಣೊಗು ಶ್ರೀ ಕೆ. ಎಸ್. ಅಡಿಗೆರ್ ಶಂಕುಸ್ಥಾಪನೆ ಮಲ್ತೆರ್. 1955 ನೆಟ್ಟ್ ಐತ ಉದ್ಘಾಟನೆ ಮಲ್ತಿನಾರ್ ಅದಗ ಆರೋಗ್ಯ ಮಂತ್ರಿಲಾದಿತ್ತಿನ ಎ.ಬಿ. ಶೆಟ್ರ್).

ಬ್ಯಾಂಕ್‌ದ ಸ್ಥಾಪಕ ಡೈರೆಕ್ಟರ್‌ನಕಲೆನ ಪುದರ್ ಇಂಚ ಉಂಡು. ಶ್ರೀ ಎ. ಬಾಲಕೃಷ್ಣ ಶೆಟ್ಟಿ, ಕೆ. ಜಗನ್ನಾಥ ಬಲ್ಲಾಳ್, ಡಾ. ಎನ್ ಮಹಾಬಲ ಅಡ್ಯಂತಾಯ, ಬೆಳಿಂಜೆ ಕೃಷ್ಣಯ್ಯ ಹೆಗ್ಡೆ, ಟಿ. ನಾರಾಯಣ ಭಂಡಾರಿ, ಸಾಹುಕಾರ ಅಂತಯ ಶೆಟ್ಟಿ, ಕೆ. ವೆಂಕಪ್ಪ ಶೆಟ್ಟಿ, ವೈ. ಸೂರ್ಯಣ್ಣ ಶೆಟ್ಟಿ, ಬಿ. ಮಂಜಯ್ಯ ಹೆಗ್ಡೆ, ಬಿ. ಹಿರಿಯಣ್ಣ ಹೆಗ್ಡೆ, ಜಾರ್ಕಳ ನಾಗಣ್ಣ ಹೆಗ್ಡೆ, ಬಂಬ್ರಾಣ ವೆಂಕಪ್ಪ ಪೂಂಜ, ರಾಮಕೃಷ್ಣ ಪೂಂಜ, ಎ.ಎಸ್. ಮಹಾಬಲ ರೈ.)

ಸುಂದರ ರಾಮ ಶೆಟ್ರೆನ ಸಾಹಸ ಬೊಕ್ಕ ವಿಜಯದ ಕತೆ ಪನೊಡ್ಡ ವಿಜಯಾ ಬ್ಯಾಂಕ್‌ದ ಕತೆನ್ಲಾ ಪನೊಡಾಪುಂಡು. ಅವು ಒಂಜೆಕ್ಕೊಂಜಿ ಬುಡ್ದು ಇಜ್ಜಿ. 1930–31 ನೆ ವರ್ಸೊಡೊ ದ.ಕ. ರೈತೆರ್ ಬಾರೀ ಕಷ್ಟ ಪಡೆಯೆರ್. ಅಕಲೆನ ಬುಲೆಕ್ ಸರಿತ ಬಿಲೆ ಇತ್ತ್‌ಜಿ. ದುಡ್ಡುದ ಕಷ್ಟೊಡುಪ್ಪುನಗ ಅಕಲೆಗ್ ಸಾಲ ಕೊರ್ಪಿನ ಸೌಕರ್ಯ

ಇತ್ತ್‌ಜಿ. ಈ ವ್ಯವಸ್ಥೆನ್, ಅವಸ್ಥೆನ್ ತೂದು ಎ.ಬಿ. ಶೆಟ್ಟ್ರ್ ಬ್ಯಾಂಕ್ ಸ್ಥಾಪನೆ ಮಲ್ಪೆರೆ ದುಂಬತ್ತೆರ್. ಕೃಷಿ ಕಸುಬುದ ಜನೊಕುಲೇ ಐತ ಡೈರೆಕ್ಟರ್‌ನಕುಲಾಯೆರ್. ಸುರು ಬಿಡುಗಡೆ ಮಲ್ದಿನ ಐತ ಬಂಡವಾಳ ಐನ್ ಲಕ್ಷ ರೂಪಾಯಿ. ಸಂದಾಯ ಆಯಿನ ಬಂಡವಾಳ 8,670 ರೂಪಾಯಿ. ಐತ ರಡ್ಡನೆ ಬ್ರಾಂಚ್ ಉಡುಪಿಡ್ 1936 ಟ್ಟ್ ಉದಿಪನಾಂಡ್. ಸುರು ಸುರುಟು ಐತ ಬೆಳವಣಿಗೆ ಬಾರೀ ಮಂದ ಗತಿಟ್ ಸಾಗೊಂದಿತ್ತ್‌ಂಡ್. 1937 ಡ್ದ್ 1953 ಮುಟ್ಟ ಅದ್ಯಕ್ಷೆರಾದ್ ಬಿ. ಮಂಜಯ್ಯ ಹೆಗ್ಡೆರ್ ಜವಾಬ್ದಾರಿ ವಯಿಸೊಂಡೆರ್. ಈ ಪದಿನಾಲ್ ವರ್ಸೊಡು ಐತ ಠೇವಣಿ ನಲ್ಪತ್ತೇಳರೆ ಲಕ್ಷೊಗು ಪೋಂಡು. ಒಟ್ಟುಗು ಪದಿಮೂಜಿ ಶಾಖೆಲು ಕೆಲಸ ಮಲ್ಪರೆ ಸುರುಮಲ್ತ್. ಮಂಜಯ್ಯ ಹೆಗ್ಡೆರ್‌ಡ್ದ್ ಬೊಕ್ಕ ಕೆ. ಸುಂದರ ರಾಮ ಶೆಟ್ಟಿ ಪನ್ಪಿನಾರ್ (ಕುಡಲದಾರ್) ಈ ಬ್ಯಾಂಕ್‌ದ ಅದ್ಯಕ್ಷೆರಾಯೆರ್. ಆರ್. ಏಳ್ ವರ್ಸೊಡು ಪದಿಮೂಜಿ ಇತ್ತಿನ ಎಗ್ಗೆಲೆನ್ ಇರ್ವತ್ತೊಂಜೆಕ್ಕ್ ಕೊಣೆಯೆರ್. ಆಯಿಡ್ದ್ ಬೊಕ್ಕ ಡಾ. ಬಾಳಪ್ಪ ಶೆಟ್ಟ್ರ್ ರಡ್ಡ್ ವರ್ಷ ಅದ್ಯಕ್ಷೆರಾಯೆರ್. 1962ಟ್ಟ್ ಅರೆನ ಕೈಡ್ದ್ ಅದ್ಯಕ್ಷೆ ಆದ್ ಅಧಿಕಾರ ಪಡೆಯಿನಾರ್ ಎಮ್ ಸುಂದರ ರಾಮ ಶೆಟ್ಟ್ರ್.

ಎಮ್ ಸುಂದರ ರಾಮ ಶೆಟ್ಟ್ರ್ ಅದ್ಯಕ್ಷೆರಾನಗ ಬ್ಯಾಂಕ್‌ದ ಠೇವಣಿ 180 ಲಕ್ಷ. ಸಾಲ 114 ಲಕ್ಷ. ಲಾಭ ಒಟ್ಟುಗು ರಡ್ಡ್ ಲಕ್ಷ (1962) ಕೆಲಸೊಗು ಇತ್ತಿನ ಸಿಬ್ಬಂದಿಲು 176 ಜನ.

# ಬ್ಯಾಂಕ್ ಅಧ್ಯಕ್ಷೆರಾದ್

